




ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು

> ವಿಶ್ವ ಮಹಾಮಾರಿ ಕೊರೋನಾ ಸೋಂಕು ನಿಯಂತ್ರಣಕ್ಕೆ ಜನರ ಜೀವನ ರಕ್ಷಣೆಗೆ ರಾಜ್ಯ ಸರ್ಕಾರಗಳು ಬಹಳ ಎಚ್ಚರಿಕೆಯ ಕ್ರಮಗಳನ್ನು ಇಡುತ್ತಿವೆ. ಭಾರತದಲ್ಲಿ ಈವರೆಗೆ 83 ಲಕ್ಷ ಜನರು ಸೋಂಕಿತರಾಗಿದ್ದು, 1.23 ಲಕ್ಷ ಜನ ಮರಣ ಹೊಂದಿದ್ದಾರೆ. ಲಸಿಕೆ ಇನ್ನೂ ಲಭ್ಯವಾಗದ ಕಾರಣಗಳಿಂದ ಜನತೆ ನಿರಂತರವಾಗಿ, ಕಡ್ಡಾಯವಾಗಿ ಮಾಸ್ಕ್ ಮತ್ತು ಸ್ಯಾನಿಟೈಜರ್ ಬಳಕೆಯ ಜೊತೆಗೆ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಆರೋಗ್ಯದ ಮೇಲೆ ಉತ್ತಮ ಪರಿಣಾಮ ಬೀರುತ್ತವೆ.

# 67ನೇ ಅಖಿಲ ಭಾರತ ಸಹಕಾರ ಸಪ್ತಾಹ : ಸರಳವಾಗಿರಲಿ, ಪರಿಣಾಮಕಾರಿಯಾಗಿರಲಿ

ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ ಇವರ ಮಾರ್ಗದರ್ಶನದಲ್ಲಿ ಪ್ರತಿವರ್ಷ ನವೆಂಬರ್ 14 ರಿಂದ ನವೆಂಬರ್ 20 ರವರೆಗೆ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಈ ಬಾರಿಯ ಸಹಕಾರ ಸಪ್ತಾಹ ಧ್ಯೇಯವು – "ಕೊರೋನಾ ಸೋಂಕು – ಆತ್ಮನಿರ್ಭರ ಭಾರತ – ಸಹಕಾರ ಸಂಸ್ಥೆಗಳು" ಎಂಬುದಾಗಿದೆ. ಈ ವರ್ಷ ಕೊರೋನಾ ಸೋಂಕು ವ್ಯಾಪಕವಾಗಿ ಹರಡಿ ದೇಶದ ಅರ್ಥ ವ್ಯವಸ್ಥೆಯನ್ನು ಹಿನ್ನಡೆ ಮಾಡಿದೆ. ಉದ್ಯೋಗ ನಷ್ಟ, ವ್ಯವಹಾರಗಳಲ್ಲಿ ಕುಸಿತ – ಆರ್ಥಿಕ ಹಿಂಜರಿತದಿಂದ ನಾವೆಲ್ಲರೂ ಹೊಸ ಭಾರತವನ್ನು ನಿರ್ಮಾಣ ಮಾಡಿಕೊಳ್ಳಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ.

ವಿಶ್ವ ಮಹಾಮಾರಿ ಕೊರೋನಾ ಸೋಂಕು ನಿಯಂತ್ರಣಕ್ಕೆ ಜನರ ಜೀವನ ರಕ್ಷಣೆಗೆ ರಾಜ್ಯ ಸರ್ಕಾರಗಳು ಬಹಳ ಎಚ್ಚರಿಕೆಯ ಕ್ರಮಗಳನ್ನು ಇಡುತ್ತಿವೆ. ಭಾರತದಲ್ಲಿ ಈವರೆಗೆ 83 ಲಕ್ಷ ಜನರು ಸೋಂಕಿತರಾಗಿದ್ದು, 1.23 ಲಕ್ಷ ಜನ ಮರಣ ಹೊಂದಿದ್ದಾರೆ. ಲಸಿಕೆ ಇನ್ನೂ ಲಭ್ಯವಾಗದ ಕಾರಣಗಳಿಂದ ಜನತೆ ನಿರಂತರವಾಗಿ, ಕಡ್ಡಾಯವಾಗಿ ಮಾಸ್ಕ್ ಮತ್ತು ಸ್ಯಾನಿಟೈಜರ್ ಬಳಕೆಯ ಜೊತೆಗೆ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಆರೋಗ್ಯದ ಮೇಲೆ ಉತ್ತಮ ಪರಿಣಾಮ ಬೀರುತ್ತವೆ.

ಕೋವಿಡ್–19ರ ಲಾಕ್‌ಡೌನ್ ಕಾರಣಗಳಿಂದ ಜನತೆ ಹಲವಾರು ಸಮಸ್ಯೆಗಳನ್ನು ಎದುರಿಸಿದ್ದು ಸತ್ಯ. ಕೊರೋನಾ ಸೋಂಕು ಇನ್ನೂ ನಿಯಂತ್ರಣಕ್ಕೆ ಬರುತ್ತಿಲ್ಲ. ಈಗಾಗಲೇ ವಿಶ್ವದ ಇತರ ರಾಷ್ಟ್ರಗಳಲ್ಲಿ ಎರಡನೇ ಅಲೆ ಪ್ರಾರಂಭವಾಗಿದೆ. ಈ ಹಿನ್ನೆಲೆಯಲ್ಲಿ ದೇಶದ ಜನಸಂಖ್ಯೆಯ ಶೇ.20ಕ್ಕೂ ಹೆಚ್ಚು ಸದಸ್ಯ ಬಳಗವನ್ನು ಹೊಂದಿರುವ ಸಹಕಾರ ವಲಯವು ತನ್ನ ಸದಸ್ಯರು ಮತ್ತು ಅವರ ಅವಲಂಬಿತರ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಾ ಸಕಾಲದಲ್ಲಿ ಎಲ್ಲಾ ರೀತಿಯ ನೆರವುಗಳನ್ನು ನೀಡುತ್ತಾ ಬಂದಿವೆ ಹಾಗೂ ಸಾರ್ವಜನಿಕರಲ್ಲೂ ಜಾಗೃತಿ – ಅರಿವು ಮೂಡಿಸುತ್ತಿವೆ.

ಈ ವರ್ಷ ಸಹಕಾರ ಸಂಸ್ಥೆಗಳು ಅತಿ ಹೆಚ್ಚು ಜಾಗೃತಿ ವಹಿಸಿ ಸದಸ್ಯರಲ್ಲಿ ಅರಿವು ಮೂಡಿಸಿ ತಮ್ಮ ಸೇವೆಗಳನ್ನು ವಿಸ್ತರಿಸಿಕೊಳ್ಳುವುದು ಸೂಕ್ತವೆನಿಸುತ್ತದೆ. ಏಳು ದಿನಗಳ ಕಾಲ ನಡೆಯುವ ಕಾರ್ಯಕ್ರಮಗಳಲ್ಲಿ ಮುಂದಿನ ವರ್ಷದ ಗುರಿ ಚಳವಳಿಯ ಬಲವರ್ಧನೆಗೆ ಕೈಗೊಳ್ಳಬಹುದಾದ ದೂರದೃಷ್ಟಿ ಚಿಂತನೆಗಳ ಬಗ್ಗೆ ತಜ್ಞರಿಂದ ಚರ್ಚೆ ಉಪನ್ಯಾಸಗಳನ್ನು ಏರ್ಪಡಿಸಿ ಪರಿಣಾಮಕಾರಿಯಾಗಿ ಆಚರಿಸುವಂತಾಗಲಿ. **ಎಲ್ಲಾ ಸಹಕಾರಿ ಬಂಧುಗಳಿಗೆ ಬೆಳಕಿನ ಹಬ್ಬ ದೀಪಾವಳಿ ಹಾಗೂ 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಶುಭಾಶಯಗಳು.**

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಲಹೆಗಾರರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# "ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ನಾಟೆಕಲ್ ಶಾಖೆಯ ಪ್ರಥಮ ವಾರ್ಷಿಕೋತ್ಸವ - ಗ್ರಾಹಕರ ಸಭೆ"



**ಮಂಗಳೂರು** : ಇತ್ತೀಚಿಗೆ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.) ಮಂಗಳೂರು ಇದರ ನಾಟೆಕಲ್ ಶಾಖೆಯ ಪ್ರಥಮ ವಾರ್ಷಿಕೋತ್ಸವ ಹಾಗೂ ಗ್ರಾಹಕರ ಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಮಂಜನಾಡಿ ಗ್ರಾಮ ಪಂಚಾಯತ್‌ನ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಮಹಮ್ಮದ್ ಹನೀಫ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ಮಂಜಪ್ಪ, ಸದಸ್ಯರಾದ ಶ್ರೀ ಅಬ್ಬಾಸ್ ಎಮ್, ಶ್ರೀ ಭಾಸ್ಕರ್ ಪಿ. ಇವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಸುಭಾಷಿತ :** ಬರವೇ ಇರಲಿ, ಸಮೃದ್ಧಿ ಬರಲಿ, ತಾಳುವ ಬಾಳಿನ ಬಾವುಟವಿರಲಿ, ಬದಲಾವಣೆಯೇ ಬಾಳಿನೊಗ್ಗರಣೆ.
– ಕೆ.ಎಸ್. ನರಸಿಂಹಸ್ವಾಮಿ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.



# 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯ ಮಾರ್ಗಸೂಚಿಗಳು

ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ ಇವರ ನೇತೃತ್ವದಲ್ಲಿ ದೇಶಾದ್ಯಂತ 67ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ನವೆಂಬರ್–14ರಿಂದ 20ರವರೆಗೆ ಆಚರಿಸಲಾಗುತ್ತದೆ. ಒಂದು ವಾರ ಕಾಲ ನಡೆಯುವ ಈ ಕಾರ್ಯಕ್ರಮಗಳಲ್ಲಿ ಸಹಕಾರ ಸಂಸ್ಥೆಗಳು ತಮ್ಮ ಯಶಸ್ಸನ್ನು ತೋರ್ಪಡಿಸಿಕೊಳ್ಳಲು, ಅವುಗಳ ಸಾಧನೆಗಳನ್ನು ಬಿಂಬಿಸಿಕೊಳ್ಳಲು ಹಾಗೂ ಮುಂದಿನ ಗುರಿ ಇರಿಸಿಕೊಳ್ಳುತ್ತವೆ. ಸಪ್ತಾಹದಲ್ಲಿ ಸಹಕಾರ ಸಂಸ್ಥೆಗಳು ಕಾರ್ಯಾಗಾರಗಳನ್ನು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಹಾಗೂ ಹಲವು ಬಗೆಯ ಸ್ಪರ್ಧೆಗಳನ್ನು ಏರ್ಪಡಿಸುತ್ತವೆ. ಪ್ರಸ್ತುತ ಸಹಕಾರ ಸಂಸ್ಥೆಗಳು ಸ್ಪರ್ಧಾತ್ಮಕ ಆರ್ಥಿಕ ಸವಾಲುಗಳನ್ನು ಎದುರಿಸುತ್ತಿವೆ. ಜೊತೆಗೆ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಉತ್ತಮವಾಗಿ ಕಾರ್ಯನಿರ್ವಹಿಸಲೇಬೇಕಾಗುತ್ತದೆ. ಇದಕ್ಕಾಗಿ ಸಹಕಾರಿ ಆಡಳಿತವನ್ನು ಬಲಪಡಿಸಿಕೊಳ್ಳುವುದು ಅಗತ್ಯವಾಗಿದೆ.

ಈ ವರ್ಷದ ಸಹಕಾರ ಸಪ್ತಾಹದ ಧ್ಯೇಯವು **"ಸಾಂಕ್ರಾಮಿಕ ಕೋವಿಡ್–ಆತ್ಮ ನಿರ್ಭರ ಭಾರತ್ – ಸಹಕಾರ ಸಂಸ್ಥೆಗಳು"** ಎಂಬುದಾಗಿದೆ. ಕಳೆದ ಹತ್ತು ತಿಂಗಳುಗಳಿಂದ ವಿಶ್ವವು ಕೊರೋನಾ ಸಾಂಕ್ರಾಮಿಕ ರೋಗದಿಂದ ಪರಿತಪಿಸುವಂತಾಗಿದೆ. ಇದರಲ್ಲಿ ಭಾರತವೂ ಹೊರತಾಗಿಲ್ಲ. ಕೋವಿಡ್–19ರ ಸೋಂಕಿನಿಂದ ವಿಶ್ವದ ಜನತೆ ಬಹುಬಗೆಯ ಸಮಸ್ಯೆಗಳ ಜೊತೆಗೆ ಅತಿವೃಷ್ಠಿ–ಅನಾವೃಷ್ಠಿ, ಭೂಕಂಪನಗಳು, ಮಿಡತೆಗಳ ಹಾವಳಿ ಹೀಗೆ ಹತ್ತು ಹಲವು ಗಂಭೀರ ಸಮಸ್ಯೆಗಳನ್ನು ಜನತೆ ಎದುರಿಸುತ್ತಿದ್ದಾರೆ. ದೇಶದ ಜನತೆ ಆರ್ಥಿಕ ಸ್ವಾವಲಂಬನೆ ಸಾಧಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ರವರು **"ಆತ್ಮನಿರ್ಭರ್ ಭಾರತ್ ಪ್ಯಾಕೇಜ್"** ಘೋಷಿಸಿ ಜನತೆ ಎಲ್ಲಾ ವಲಯದಲ್ಲೂ ಸ್ವಾವಲಂಬನೆ ಸಾಧಿಸಲು ನೆರವಾಗಿದ್ದಾರೆ. ಇದು ಸ್ವಾವಲಂಬನೆಯ ಭಾರತ ಆಂದೋಲನಕ್ಕೆ ಕಾರಣವೂ ಆಗಿದೆ. ಇದು ಜಾಗತಿಕ ಮಟ್ಟದಲ್ಲಿ ಭಾರತವು ಆರ್ಥಿಕವಾಗಿ ಸ್ವಾವಲಂಬನೆಗೊಂಡು ಬಲಿಷ್ಠ ರಾಷ್ಟ್ರವಾಗಲು ಕಾರಣವೂ ಆಗುತ್ತಿದೆ. ಹೊಸ ನೀತಿಗಳ ರಚನೆಯೊಂದಿಗೆ ಸ್ಪರ್ಧಾತ್ಮಕತೆ, ಸ್ವಾವಲಂಬನೆ–ಸ್ವಾಯತ್ತತೆ, ಸ್ಥಿತಿ ಸ್ಥಾಪಕತ್ವದ ಜೊತೆಗೆ ಸ್ವಂತ ಉದ್ದಿಮೆಗಳನ್ನು ಸ್ಥಾಪಿಸಿ ಉತ್ಪಾದಕತೆ ಹೆಚ್ಚಳಕ್ಕೆ ಕಾರಣವಾಗುತ್ತದೆ. ಇದಕ್ಕಾಗಿ ಪ್ರಧಾನಿ ಅವರು 20 ಲಕ್ಷ ಕೋಟಿ ರೂ.ಗಳ ಪ್ಯಾಕೇಜು ನೀಡಿದ್ದು, ರಾಜ್ಯ ಸರ್ಕಾರಗಳು ಈಗಾಗಲೇ ಈ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಜನರಲ್ಲಿ ಆತ್ಮ ವಿಶ್ವಾಸ ಮೂಡಿಸಿವೆ. ಒಟ್ಟಾರೆ **ಆರ್ಥಿಕತೆ, ಮೂಲಭೂತ ಸೌಕರ್ಯಗಳು, ವ್ಯವಸ್ಥೆ, ಜನಸಂಖ್ಯಾ ಶಾಸ್ತ್ರ ಮತ್ತು ಬೇಡಿಕೆಗೆ** ಹೆಚ್ಚು ಒತ್ತು ನೀಡಲಾಗುತ್ತಿದೆ.

ಈ ಮೇಲಿನ ಹಿನ್ನೆಲೆಯಲ್ಲಿ ಆತ್ಮನಿರ್ಭರ ಭಾರತ್ ಉದ್ಘೋಷವನ್ನು ಅನುಷ್ಠಾನಕ್ಕೆ ತರುವಲ್ಲಿ ಯೋಜನೆಯನ್ನು ಸಾಕಾರಗೊಳಿಸಲು ಸಹಕಾರ ಸಂಸ್ಥೆಗಳು ತಮ್ಮದೇ ಆದ ಶೈಲಿಯಲ್ಲಿ ನೆರವಾಗುತ್ತಿವೆ. ಕೋವಿಡ್–19ರ ಈ ಸಂದಿಗ್ಧ ಸಮಯದಲ್ಲಿ ಸಹಕಾರ ಸಂಸ್ಥೆಗಳು ಸಂಕಷ್ಟದಲ್ಲಿರುವ ಜನರಿಗೆ ದುರ್ಬಲರು, ವಲಸೆ ಕಾರ್ಮಿಕರಿಗೆ ಹಣಕಾಸಿನ ನೆರವು ಸಿದ್ದಪಡಿಸಿದ ಆಹಾರ ಪೂರೈಕೆ, ಆಹಾರ ಕಿಟ್ಟುಗಳ ವಿತರಣೆ, ಉಚಿತ ಹಾಲು ನೀಡಿಕೆ, ಸ್ವಚ್ಛತೆಗೆ ಆದ್ಯತೆ, ದಿನಸಿ–ತರಕಾರಿಗಳ ಮಾರಾಟ ವಿತರಣೆಯಲ್ಲಿ ನೆರವಾಗಿದೆ. ಉದಾ : ಇಫ್ಕೋ, ಕ್ರಿಭ್ಕೋ, ಅಮೂಲ್ ಕೆ.ಎಂ.ಎಫ್, ಮಾರಾಟ ಮಂಡಳಗಳು ಕೃಷಿ ಮತ್ತು ಕೃಷಿಯೇತರ ಬ್ಯಾಂಕುಗಳು ಸೇರಿವೆ.

ಈ ಬಾರಿಯ ಸಹಕಾರ ಸಪ್ತಾಹದ ಧ್ಯೇಯವು ದೇಶ ಕಟ್ಟಲು ನೆರವಾಗಬಲ್ಲದಾಗಿದೆ. ಇದು ಸಹಕಾರ ಸಂಸ್ಥೆಗಳ ಬೆಳವಣಿಗೆಯ ಅಡಿಪಾಯಕ್ಕೂ ನೆರವಾಗಲಿದೆ. ಈ ಸಂದಿಗ್ಧ ಸಮಯದಲ್ಲಿ ನೀತಿ ನಿರೂಪಕರು ಮತ್ತು ಜನತೆ ಹೆಚ್ಚು ಜವಾಬ್ದಾರಿಯಿಂದ ಈ ಸನ್ನಿವೇಶವನ್ನು ಎದುರಿಸಬೇಕಾಗಿದೆ. ಈ ಸಂಚಿಕೆಯಲ್ಲಿ ಸಹಕಾರ ಸಪ್ತಾಹ ಆಚರಣೆಯ ಕುರಿತು ಕಿರು ಮಾಹಿತಿಗಳನ್ನು ಸಹಕಾರ ಸಂಸ್ಥೆಗಳು, ಸಹಕಾರಿಗಳಿಗಾಗಿ ಪ್ರಕಟಿಸಲಾಗಿದೆ. ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಹಕಾರಿಗಳು ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಮತ್ತು ಸ್ಯಾನಿಟೈಸರ್ ಬಳಕೆ ಮಾಡುವುದು ಹಾಗೂ ಸಾಮಾಜಿಕ ಅಂತರ ಕಾಪಾಡಲು ಮನವಿ ಮಾಡುತ್ತೇನೆ. **67ನೇ ಅಖಿಲ ಭಾರತ ಸಹಕಾರ ಸಪ್ತಾಹ ಅತ್ಯಂತ ಪರಿಣಾಮಕಾರಿಯಾಗಿ ಆಚರಿಸುವಂತಾಗಲಿ ಎಂದು ಎಲ್ಲಾ ಸಹಕಾರಿ ಬಂಧುಗಳಿಗೆ ಶುಭ ಕೋರುತ್ತೇನೆ.**

ಸಹಿ\–

**ಕೆ. ಲಲಿತ ಜಿ.ಟಿ.ದೇವೇಗೌಡ**

ದಿನಾಂಕ : 30–10–2020

**ಅಧ್ಯಕ್ಷರು**

## ದಿನಾಂಕ : 14–11–2020 ಶನಿವಾರ
## ಕೊರೋನೋತ್ತರ, ಸಹಕಾರ ಸಂಸ್ಥೆಗಳ ಜವಾಬ್ದಾರಿ ಮತ್ತು ಪಾತ್ರ ದಿನ

ಕೊರೋನಾ ಸೋಂಕಿನಿಂದ ಜನತೆಯನ್ನು ರಕ್ಷಿಸುವಲ್ಲಿ ಸಹಕಾರ ಸಂಸ್ಥೆಗಳು ಮಹತ್ತರ ಪಾತ್ರವನ್ನು ನಿರ್ವಹಿಸುತ್ತಿವೆ. ಹಲವು ಪಟ್ಟಣ ಸಹಕಾರಿ ಬ್ಯಾಂಕುಗಳು ತಮ್ಮ ಸದಸ್ಯರು ಮತ್ತ ಸಿಬ್ಬಂದಿ ಕೊರೋನಾ ಸೋಂಕಿನಿಂದ ದೂರವಿರುವಂತೆ ಮಾಡಲು ಡಿಜಿಟಲ್ ಬಳಕೆಯನ್ನು ಆರಂಭಿಸಿವೆ. ಹಲವು ಸಹಕಾರ ಸಂಸ್ಥೆಗಳು ಸಂತ್ರಸ್ತರಿಗೆ ಆಹಾರ, ಬಟ್ಟೆ, ವಸತಿ, ಹಣವನ್ನು ವಿತರಿಸಿವೆ. ದೊಡ್ಡ ಸಹಕಾರ ಸಂಸ್ಥೆಗಳ ಜತೆಗೆ ಗ್ರಾಹಕ ಸಂಘಗಳಂತಹ ಸಣ್ಣಪುಟ್ಟ ಸಂಸ್ಥೆಗಳು ತಮ್ಮದೇ ಆದ ಕೊಡುಗೆಯನ್ನು ನೀಡಿವೆ. ಇಫ್ಕೋ ಅಂತಹ ಬೃಹತ್ ಸಂಸ್ಥೆ ದೊಡ್ಡ ಪ್ರಮಾಣದಲ್ಲಿ ಔಷಧಿ, ಆಹಾರ, ಮಾಸ್ಕ್, ಸ್ಯಾನಿಟೈಸರ್ ಮೊದಲಾದುವನ್ನು ವಿತರಿಸಿ ನೆರವಿನ ಹಸ್ತ ಚಾಚಿವೆ. ರಾಷ್ಟ್ರೀಯ ಸಹಕಾರಿ ಯೂನಿಯನ್ ಸಹ ಸ್ವಸಹಾಯ ಗುಂಪುಗಳು ತಯಾರಿಸಿದ ಮಾಸ್ಕ್‌ಗಳನ್ನು ವಿತರಿಸಿದೆ. ಗುಜರಾತಿನ ಅಮುಲ್ ನಿರಂತರವಾಗಿ ಹಾಲಿನ ಸರಬರಾಜು ಮಾಡುತ್ತಾ ಬಂದಿದೆ. ರಾಷ್ಟ್ರೀಯ ಸಹಕಾರ ಮಾರಾಟ ಮಹಾಮಂಡಳ ಜನತೆಗೆ ಅಗತ್ಯ ಆಹಾರ ವಸ್ತು ವಿತರಣೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಇಫ್ಕೋ, ಕ್ರಿಬ್ಕೋ ಸಂಸ್ಥೆಗಳು ರೈತರಿಗೆ ಅಗತ್ಯವಾದ ರಾಸಾಯನಿಕ ಗೊಬ್ಬರ ಅಡೆತಡೆ ಇಲ್ಲದೆ ಸರಬರಾಜು ಮಾಡಿದೆ. ರಾಷ್ಟ್ರೀಯ ಸಹಕಾರಿ ಸಂಸ್ಥೆಗಳು ಪ್ರಧಾನಿಯವರ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿವೆ. ಕರ್ನಾಟಕದಲ್ಲೂ ಸಹಕಾರಿ ಸಂಸ್ಥೆಗಳು ಗಣನೀಯ ಪ್ರಮಾಣದಲ್ಲಿ ಪರಿಹಾರ ನಿಧಿಗೆ ಕಾಣಿಕೆ ನೀಡಿರುವುದು ಶ್ಲಾಘನೀಯವಾದುದಾಗಿದೆ.

**ಆರ್ಥಿಕ ಬಿಕ್ಕಟ್ಟು :** ಇದರ ಮಧ್ಯೆ ಆರ್ಥಿಕ ಬಿಕ್ಕಟ್ಟು ತಲೆದೋರಿದೆ. ಲಾಕ್‌ಡೌನ್‌ನಿಂದಾಗಿ ವ್ಯಾಪಾರ, ವ್ಯವಹಾರ ಸ್ಥಗಿತವಾಗಿ ಆರ್ಥಿಕ ಚಟುವಟಿಕೆ ಸ್ಥಬ್ಧವಾಯಿತು. ಅದರ ಚೇತರಿಕೆಗಾಗಿ ಪ್ರಧಾನಿಯವರು 20 ಲಕ್ಷ ಕೋಟಿ ರೂ.ಗಳ ಪ್ಯಾಕೇಜನ್ನು ಘೋಷಿಸಿದ್ದಾರೆ. ಅದರ ಸದುಪಯೋಗದಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರವೂ ಪ್ರಮುಖವಾದುದಾಗಿದೆ. ಕೊರೋನೋತ್ತರ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳು ಸೇರಿದಂತೆ ರಾಷ್ಟ್ರದ ಎಲ್ಲ ಸಂಘ ಸಂಸ್ಥೆಗಳು ಆರ್ಥಿಕ ಚಟುವಟಿಕೆಯ ಬಗ್ಗೆ ಅವಲೋಕನ ನಡೆಸಿ ಅರ್ಥ ವ್ಯವಸ್ಥೆ ಭದ್ರವಾಗಿ ನೆಲೆಯೂರುವಂತೆ ಮಾಡಬೇಕಾಗಿದೆ. ಸಹಕಾರ ಸಂಸ್ಥೆಗಳು ಪ್ರಮುಖ ಪಾತ್ರ ನಿರ್ವಹಿಸುವ ಅವಕಾಶವನ್ನು ಸರ್ಕಾರಗಳು ನೀಡಬೇಕಾದ ಅಗತ್ಯವಿದೆ. ಸರ್ಕಾರಗಳು "ಸಹಕಾರೀಕರಣ ನೀತಿ" ಯ ಬಗ್ಗೆ ಪರ್ಯಾಲೋಚನೆ ನಡೆಸಬಹುದಾಗಿದೆ. ಪ್ರಾಥಮಿಕ ಸಹಕಾರ ಸಂಘಗಳು ಕೊರೋನಾ ಪೀಡಿತರಿಗೆ ಹತ್ತಿರದಲ್ಲಿರುವಂತಹ ಸಂಸ್ಥೆಗಳಾಗಿವೆ. ಜನತೆ ಆರೋಗ್ಯ ಸಮಸ್ಯೆ ಜತೆಗೆ, ಉದ್ಯೋಗನಷ್ಟ, ಆದಾಯ ಕೊರತೆ, ಮಾರುಕಟ್ಟೆ ಅಲಭ್ಯತೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೊರೋನಾ ಸೃಷ್ಟಿಸಿರುವ ನಕಾರಾತ್ಮಕ ಪರಿಸ್ಥಿತಿಯನ್ನು ಎದುರಿಸಲು ಸಹಕಾರ ಸಂಸ್ಥೆಗಳು ಸಿದ್ಧವಾಗಬೇಕಿದೆ. ಎಲ್ಲ ಸಹಕಾರ ಸಂಸ್ಥೆಗಳೂ ತಮ್ಮ ಸದಸ್ಯರ ಹಿತ ಕಾಪಾಡಲು ಸಿದ್ಧತೆ ಮಾಡಿಕೊಳ್ಳಬೇಕಾಗಿದೆ.

**ಮಾರ್ಗಸೂಚಿ :** ಸಹಕಾರ ಸಂಸ್ಥೆಗಳಿಗೆ ಕೊರೋನಾ ಸೋಂಕು ಹಲವು ಅವಕಾಶಗಳನ್ನು ಕಲ್ಪಿಸಿದೆ. ಹೊಸ ಚಿಂತನೆ, ಆವಿಷ್ಕಾರ, ಪುನರ್ ನಿರ್ಮಾಣ, ಯೋಜಿತ ಪರ್ಯಾಲೋಚನೆಗಳನ್ನು ಮಾಡಲು ಅವಕಾಶವಿದೆ. ಅದರ ಮೂಲಕ ಸವಾಲುಗಳನ್ನು ಎದುರಿಸಲು ದೊಡ್ಡ ಕೊಡುಗೆ ನೀಡಬಹುದಾಗಿದೆ.

**ಸಪ್ತಾಹದ ಅವಧಿಯಲ್ಲಿ :**

- ಕೊರೋನೋತ್ತರದಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿ ಕುರಿತು ಚಿಂತಿಸಲು ಕಾರ್ಯಾಗಾರಗಳನ್ನು ವ್ಯವಸ್ಥೆ ಮಾಡಬಹುದಾಗಿದೆ.
- ಸಹಕಾರಿಗಳಿಗೆ, ಅಧಿಕಾರಿಗಳಿಗೆ ನಾಯಕತ್ವ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು.
- ಯೋಜಿತ ಕಾರ್ಯಕ್ರಮಗಳ ವರದಿಯನ್ನು ಕೇಂದ್ರ, ರಾಜ್ಯ ಸರ್ಕಾರಗಳಿಗೆ ಕಳುಹಿಸಬಹುದು.

## ದಿನಾಂಕ : 15–11–2020 ಭಾನುವಾರ
## ಸಹಕಾರಿ ಮಾರಾಟ, ಗ್ರಾಹಕ, ರೂಪಾಂತರ ಮತ್ತು ಮೌಲ್ಯವರ್ಧನೆ ದಿನ

ಸಹಕಾರ ಸಂಸ್ಥೆಗಳು ಸಾಮಾಜಿಕ ಸೇವೆಯ ಹಿನ್ನೆಲೆವುಳ್ಳ ಸಾಮಾಜಿಕ – ಆರ್ಥಿಕ ಸಂಘಟನೆಗಳಾಗಿವೆ. ಅವು ಲಾಭದಾಸೆವುಳ್ಳ ಸಂಸ್ಥೆಗಳಲ್ಲ. ಬಡವರು, ಅಬಲರಿಗೆ ನೆರವಾಗುವ ಉದ್ದೇಶದಿಂದ ಆರಂಭವಾದ ಸಂಸ್ಥೆಗಳಾಗಿವೆ. ಅಪಾರ ಸದಸ್ಯರಿಂದ ಕೂಡಿರುವುದರಿಂದ ಸಂಸ್ಥೆಗಳು ಪಾರದರ್ಶಕವಾಗಿ ಕೆಲಸ ಮಾಡಲು ಸಾಧ್ಯವಾಗಿದೆ. ಸಹಕಾರಿ ವ್ಯವಸ್ಥೆ ಅತ್ಯುತ್ತಮ ವ್ಯವಸ್ಥೆಯಾಗಿರುವುದರಿಂದ ಸಣ್ಣ ರೈತರು, ಸೀಮಾಂತ ರೈತರ ಬೆಳೆಗೆ ಉತ್ತಮ ಬೆಲೆ ದೊರಕಿಸಿಕೊಡಲು ಸಮರ್ಥವೆನಿಸಿವೆ. ಸಹಕಾರಿ ವ್ಯವಸ್ಥೆ ಬಡವ–ಬಲ್ಲಿದರ ನಡುವಿನ ಅಂತರವನ್ನು ಕಡಿತಗೊಳಿಸಿ ಆದಾಯೋತ್ಪನ್ನ ಹೆಚ್ಚಿಸಲು ನೆರವಾಗುತ್ತಿವೆ.

**ಸಹಕಾರಿ ಮಾರಾಟ ವ್ಯವಸ್ಥೆಯ ಪ್ರಾಮುಖ್ಯತೆ :** ಸಹಕಾರಿ ಮಾರಾಟ ವ್ಯವಸ್ಥೆಯಿಂದ ರೈತರ ಸಮೂಹ ಸಾಮಾಜಿಕವಾಗಿ ತಮ್ಮ ಶ್ರಮದ ಬೆಳೆಗೆ ಉತ್ತಮ ಬೆಲೆ ದೊರಕಿಸಿಕೊಳ್ಳಲು ಸಾಧ್ಯವಾಗುತ್ತದೆ. ಮಾರಾಟ ಸಹಕಾರ ಸಂಘಗಳು ರೈತರ ಕೃಷಿ ಅಗತ್ಯಗಳನ್ನು ಪೂರೈಸುವುದಲ್ಲದೆ, ರೈತರ ಉತ್ಪನ್ನಗಳನ್ನು ಮಾರಾಟ ಮಾಡುವ ಹಾಗೂ ರೈತರ ದೈನಂದಿನ ಅಗತ್ಯಗಳನ್ನು ಪೂರೈಸಲೂ ಪ್ರಯತ್ನಿಸುತ್ತಿವೆ. ರಾಜ್ಯಗಳಲ್ಲಿ ತಾಲ್ಲೂಕು ಮಾರಾಟ ಸಹಕಾರ ಸಂಘಗಳು, ರಾಜ್ಯ ಸಹಕಾರಿ ಮಾರಾಟ ಮಹಾಮಂಡಳಗಳೂ ಇದ್ದಾವೆ. ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಸಹಕಾರಿ ಮಾರಾಟ ಮಹಾಮಂಡಳ

ರೈತರಿಗಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆಗಳು ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ವಿಶೇಷ ಒತ್ತು ನೀಡುತ್ತಾ ಬಂದಿವೆ.

**ಗ್ರಾಹಕ ಸಹಕಾರ ಸಂಘಗಳು :**

ಸದಸ್ಯರ ಹಿತ ಕಾಯುವುದು ಮತ್ತು ಶೋಷಣೆಯಿಂದ ಅವರನ್ನು ಮುಕ್ತಗೊಳಿಸುವುದೇ ಸಹಕಾರ ಸಂಸ್ಥೆಗಳ ಮುಖ್ಯ ಧ್ಯೇಯ.

ವಿಶ್ವದಲ್ಲೇ ಪ್ರಥಮ ಗ್ರಾಹಕ ಸಹಕಾರ ಸಂಘ 1844 ರಲ್ಲಿ ಮ್ಯಾಂಚೆಸ್ಟರ್‌ನಲ್ಲಿ ಆರಂಭವಾಯಿತು.

ಹೀಗಾಗಿ ಗ್ರಾಹಕ ಮತ್ತು ಮಾರಾಟ ಸಹಕಾರ ಸಂಘಗಳು ರೈತರ, ಗ್ರಾಹಕರ ಹಿತರಕ್ಷಣೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿವೆ.

**ಸಹಕಾರಿ ರೂಪಾಂತರ :**

ಸಹಕಾರಿ ಮಾರಾಟದ ಜತೆಗೆ ರೂಪಾಂತರ ಕಾರ್ಯವು ತೃಪ್ತಿಕರವಾಗಿ ನಡೆಯುತ್ತಿದೆ. ಅಕ್ಕಿ ಗಿರಣಿಗಳು, ಹತ್ತಿ ಗಿರಣಿಗಳು, ನಾರಿನ ಗಿರಣಿಗಳು ಸಹಕಾರಿ ಪ್ರಯತ್ನದಲ್ಲಿ ಯಶಸ್ಸು ಕಂಡಿವೆ.

**ಮೌಲ್ಯವರ್ಧನ :**

ಮೂಲ ಉತ್ಪನ್ನವನ್ನು ಪರಿವರ್ತನೆಗೊಳಿಸುವ ಮೂಲಕ ಅದರ ಮೌಲ್ಯ ವೃದ್ಧಿಸುವುದೇ ಮೌಲ್ಯವರ್ಧನ ಪ್ರಕ್ರಿಯೆ ಅನಿಸುತ್ತದೆ. ಇದರಿಂದ ರೈತರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದರ ಜೊತೆಗೆ ಸಮಗ್ರ ಗ್ರಾಮೀಣ ಅಭಿವೃದ್ಧಿಯೂ ಸಾಧ್ಯವಾಗಲಿದೆ.

**ಸಪ್ತಾಹದ ಸಂದರ್ಭದಲ್ಲಿ :**

- ವಿಚಾರಗೋಷ್ಠಿ, ಸಭೆ, ಸಮ್ಮೇಳನಗಳನ್ನು ವ್ಯವಸ್ಥೆ ಮಾಡಬಹುದು.
- ಯಶೋಗಾಥೆಗಳನ್ನು ಸಂಗ್ರಹಿಸಿ ಪ್ರಕಟಿಸಿ ಪ್ರಚಾರ ನೀಡಬಹುದು.
- ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಬಹುದು.

## ದಿನಾಂಕ : 16–11–2020 ಸೋಮವಾರ
## ಅಂತರ್ಜಾಲ ಸಂಪರ್ಕದ ಮೂಲಕ ಸಹಕಾರ ಶಿಕ್ಷಣ–ತರಬೇತಿಯ ಪುನರ್‌ಮನನ ದಿನ

ಸಹಕಾರ ಶಿಕ್ಷಣ–ತರಬೇತಿ ಕಾರ್ಯಕರ್ತನ ವೃತ್ತಿ ಸಾಮರ್ಥ್ಯವನ್ನು ವೃದ್ಧಿಸುತ್ತದೆ. ಸಹಕಾರ ಸಂಸ್ಥೆಯ ಸಮಗ್ರ ಬೆಳವಣಿಗೆಗೆ ಅಗತ್ಯವಾದ ಕ್ರಿಯಾಶೀಲ ಮನೋಭಾವವನ್ನು ಪ್ರೇರೇಪಿಸುತ್ತದೆ. ಈ ದಿಸೆಯಲ್ಲಿ ಕೆಲವು ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕಿದೆ.

- ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮದಲ್ಲಿ ಕೆಲಸ ಮತ್ತು ಕೆಲಸಗಾರರ ನಡುವಿನ ಸಂಬಂಧವನ್ನು ಸೃಷ್ಟಿಸುವುದು.
- ಸಿಬ್ಬಂದಿ ಸಾಮರ್ಥ್ಯವನ್ನು ವೃದ್ಧಿಸುವ ಯೋಜನೆಗಳನ್ನು ರೂಪಿಸುವುದು.
- ನೂತನ ತಾಂತ್ರಿಕತೆ ಬಳಕೆಯಿಂದ ಹೊಸ ಜವಾಬ್ದಾರಿಯನ್ನು ಹೊರಲು ಸಿಬ್ಬಂದಿಯನ್ನು ಸಿದ್ಧಪಡಿಸುವುದು.
- ಒಟ್ಟಾರೆ ಸಂಸ್ಥೆಯ ಕಾರ್ಯತತ್ಪರತೆಯನ್ನು ಹೆಚ್ಚಿಸುವ ಪ್ರಯತ್ನ ಮಾಡುವುದು.

ಶಿಕ್ಷಣ–ತರಬೇತಿ ನಿರಂತರವಾದುದು. ಕಾವ್ಯ ಸಂಸ್ಕೃತಿಗೆ ಕೊನೆ ಎಂಬುದಿಲ್ಲ. ಪರಿಣಾಮಕಾರಿ ಶಿಕ್ಷಣ–ತರಬೇತಿ ಸಿಬ್ಬಂದಿಯ ಸಾಮರ್ಥ್ಯವನ್ನು, ಜ್ಞಾನವನ್ನು, ಪ್ರೇರೇಪಣ ಶಕ್ತಿಯನ್ನು ವೃದ್ಧಿಸುತ್ತದೆ.

**ದೂರಶಿಕ್ಷಣ – ಉತ್ತಮ ಅವಕಾಶ :**

ಇತ್ತೀಚಿನ ದಿನಗಳಲ್ಲಿ ಕೊರೋನಾ ಸೋಂಕು ವಿಶ್ವ ಆರ್ಥಿಕತೆಯನ್ನು ಛಿದ್ರಗೊಳಿಸಿದೆ. ವಿಶ್ವದ ಹಲವಾರು ರಾಷ್ಟ್ರಗಳು, ಭಾರತವೂ ಸೇರಿದಂತೆ, ಲಾಕ್‌ಡೌನ್ ಮೂಲಕ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿವೆ. ಇದರ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ಶಿಕ್ಷಣ–ತರಬೇತಿ ವ್ಯವಸ್ಥೆಯೂ ತೊಂದರೆಗೆ ಈಡಾಗಿದೆ. ಶಿಕ್ಷಣ–ತರಬೇತಿ, ಪರೀಕ್ಷೆ, ಮೌಲ್ಯಮಾಪನ ಪ್ರಕ್ರಿಯೆಗಳಿಗೆ ಅಡ್ಡಿಯಾಗಿದೆ. ಆದುದರಿಂದ ಸಹಕಾರ ಕ್ಷೇತ್ರದ ಬಹುತೇಕ ಶಿಕ್ಷಣ ತರಬೇತಿ ಸಂಸ್ಥೆಗಳು ಡಿಜಿಟಲ್ ವ್ಯವಸ್ಥೆಯನ್ನು ಅಪ್ಪಿಕೊಂಡಿವೆ. ಇದರಲ್ಲೂ ಅಡೆತಡೆಗಳಿಗೆ ಅವಕಾಶವಿದೆ. ಪರಿಣಾಮಕಾರಿ ಶಿಕ್ಷಣ–ತರಬೇತಿ ಸವಾಲಾಗಿ ಪರಿಣಮಿಸಿದೆ. ದೂರಶಿಕ್ಷಣ ವ್ಯವಸ್ಥೆಯಲ್ಲಿ ಗಮನಿಸಬೇಕಾದ ಅಂಶಗಳು :

- ಊಟ, ವಸತಿ, ತರಬೇತಿ ಶುಲ್ಕ ಮೊದಲಾದುವನ್ನು ಕಡಿತಗೊಳಿಸುವುದು.
- ಭೌತಿಕವಾಗಿ ಹಾಜರಿಯಿಂದ ವಿನಾಯಿತಿ ನೀಡುವುದು.
- ಸಮಸ್ಯೆ ತಲೆದೋರಿದಾಗ ಪರಿವರ್ತನೆಗೆ ಅವಕಾಶವಿರುವುದು.
- ಅತ್ಯುತ್ತಮ ತರಬೇತಿದಾರರನ್ನು, ತಜ್ಞರನ್ನು ನೇಮಿಸಿಕೊಳ್ಳುವುದು.
- ತರಬೇತಿ ಅವಧಿ 2 ರಿಂದ 3 ಗಂಟೆಗಳ ಕಾಲ ಇರುವುದು.
- ತರಬೇತಿ ಅಭ್ಯರ್ಥಿಗಳು ಮೊಬೈಲ್, ಲ್ಯಾಪ್‌ಟಾಪ್, ಡೆಸ್ಕ್‌ಟಾಪ್ ನೊಂದಿಗೆ ಕ್ರಿಯಾಶೀಲರಾಗುವುದು.

**ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳು**

ದೂರಶಿಕ್ಷಣ ತರಬೇತಿಗೆ ಅಗತ್ಯವಾದ ಉತ್ತಮ ವಾತಾವರಣವನ್ನು ಸೃಷ್ಟಿಸಬೇಕು. ಆರೋಗ್ಯಕರ ತರಬೇತಿ ನೀಡುವತ್ತ ಗಮನಹರಿಸಬೇಕು. ಉಪನ್ಯಾಸ, ತರಬೇತಿ ಜತೆಗೆ ತರಬೇತಿ ಅಭ್ಯರ್ಥಿಗಳು ಕಲಿಕೆಗೆ ಬಂದಿರುವವರು ಎಂಬ ಭಾವ ಬರುವಂತೆ ಮಾಡಬೇಕು.

ದೂರಶಿಕ್ಷಣ ವ್ಯವಸ್ಥೆ ಪರಿಣಾಮಕಾರಿಯಾಗಲು ಅಗತ್ಯವಾದ ಪರಿಕರಗಳನ್ನು ಸಿದ್ಧಪಡಿಸಿಕೊಂಡಿರಬೇಕು. ಅಭ್ಯರ್ಥಿಗಳ ಮನಸ್ಸಿಗೆ ಹಿಡಿಯುವಂತೆ ತರಬೇತಿ ನೀಡುವತ್ತ ಪ್ರಯತ್ನಗಳು ಆಗಬೇಕು. ಅತ್ಯಾಧುನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದಗತ್ಯ.

**ಸಪ್ತಾಹದ ಅವಧಿಯಲ್ಲಿ :**

- ಕೊರೋನೋತ್ತರ ಶಿಕ್ಷಣ ತರಬೇತಿಯ ಪಾತ್ರ ಕುರಿತು ವೆಬಿನಾರ್ ವ್ಯವಸ್ಥೆ ಮಾಡಬಹುದು.
- ಜಾಗೃತಿವುಂಟು ಮಾಡುವ ಶಿಕ್ಷಣ-ತರಬೇತಿಗೆ ಆದ್ಯತೆ ನೀಡುವುದು.
- ಸಭೆ, ಸಮ್ಮೇಳನ, ವಿಚಾರಗೋಷ್ಠಿ, ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸಬಹುದು.
- ತರಬೇತಿದಾರರಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

## ದಿನಾಂಕ : 17-11-2020 ಮಂಗಳವಾರ
## ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು

ಸಹಕಾರ ತತ್ವಗಳಲ್ಲಿ ಮೂಲಭೂತವಾದ ಹಾಗೂ ಪ್ರಮುಖವಾದ ತತ್ವ "ಸಹಕಾರ ಸಂಸ್ಥೆಗಳ ಸಹಕಾರ" ಎಂಬುದಾಗಿದೆ. ತತ್ವಗಳಲ್ಲಿ 6ನೆಯದಾದರೂ ಅದರ ಪ್ರಾಮುಖ್ಯತೆ ಕಡಿಮೆಯೇನಲ್ಲ. ಪ್ರಪಂಚದ ಎಲ್ಲ ಸಹಕಾರ ಸಂಸ್ಥೆಗಳೂ ಈ ಏಳು ತತ್ವಗಳ ಅಡಿಯಲ್ಲೇ ಆರಂಭವಾಗಿರುತ್ತವೆ. ಸಹಕಾರ ತತ್ವ ಪಾಲನೆ ಮಾಡುವವರು ಪರಸ್ಪರ ಸಹಕರಿಸುವುದನ್ನು ಆದ್ಯ ಕರ್ತವ್ಯ ಎಂದು ಭಾವಿಸಬೇಕು. ಸಹಕಾರ ಸಂಘವೊಂದು ಮತ್ತೊಂದು ಸಹಕಾರ ಸಂಘದೊಂದಿಗೆ ಸಹಕರಿಸದಿದ್ದರೆ ಅದು ಸಹಕಾರ ಸಂಘ ಅನಿಸಿಕೊಳ್ಳುವುದೇ ಇಲ್ಲ.

ಸಹಕಾರ ಸಂಸ್ಥೆಗಳ ಅಬಲರ ಕೈಯಲ್ಲಿನ ಆಯುಧಗಳು ಎಂದೇ ತಿಳಿಯಬೇಕು. ಸಹಕಾರಿ ವ್ಯವಸ್ಥೆಯಲ್ಲಿ ಪ್ರಾಥಮಿಕ ಹಂತದಿಂದ ರಾಷ್ಟ್ರದ ಹಂತಕ್ಕೆ ಹಬ್ಬಿರುವುದನ್ನು ಕಾಣುತ್ತೇವೆ. ಇದು ಸಹಕಾರ ವ್ಯವಸ್ಥೆಯ ಎಲ್ಲ ಹಂತಗಳಲ್ಲೂ ವ್ಯಾಪಿಸಿದೆ. ಪ್ರಾಥಮಿಕ ಹಂತದ ಸಂಘವನ್ನು ಬಲಪಡಿಸಬೇಕೆಂಬ ತತ್ವ ಪ್ರಮುಖವಾದುದಾಗಿದೆ. ಇಲ್ಲಿ ವ್ಯಕ್ತಿ ಸದಸ್ಯರಿಗೆ ಆಧ್ಯತೆ ಇರುತ್ತದೆ.

ಸಮಾಜದ ಆರ್ಥಿಕ - ಸಾಮಾಜಿಕ ಸ್ಥಿತಿಯನ್ನು ಉತ್ತಮ ಪಡಿಸಬೇಕೆಂಬುದೇ ಸಹಕಾರ ಸಂಸ್ಥೆಗಳ ಆಶಯವಾದರೆ, ರಾಷ್ಟ್ರ, ರಾಜ್ಯ ಮಟ್ಟದ ಸಹಕಾರಿ ಸಂಸ್ಥೆಗಳು ಗ್ರಾಮೀಣಮಟ್ಟದ ಸಹಕಾರ ಸಂಸ್ಥೆಗಳನ್ನು ಬಲಪಡಿಸಲು ಪ್ರಯತ್ನಿಸಬೇಕು. ಆ ದಿಸೆಯಲ್ಲಿ ಅಗತ್ಯ ಯೋಜನೆಗಳನ್ನು ರೂಪಿಸಬೇಕು.

ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಸುಸ್ತಿ ಪ್ರಮಾಣವನ್ನು ತಗ್ಗಿಸಲು, ನಷ್ಟವನ್ನು ಕೊನೆಗೊಳಿಸಲು ಸರ್ಕಾರಗಳು ಅಂತಹ ಸಂಸ್ಥೆಗಳಿಗೆ ನೀಡುವ ಸಹಾಯಧನ ಅವುಗಳಿಗೆ ನೇರವಾಗಿ ತಲುಪುವಂತೆ ನೋಡಿಕೊಳ್ಳಬೇಕು. ಪ್ರಾಥಮಿಕ ಸಹಕಾರ ಸಂಘಗಳು ಖಾಸಗಿಯವರೊಂದಿಗೆ ಸ್ಪರ್ಧಿಸಲು ಸಮರ್ಥವಾಗುವಂತೆ ನೋಡಿಕೊಳ್ಳಬೇಕು.

ಗ್ರಾಹಕ ವಸ್ತುಗಳ ಮಾರಾಟದ ಸಂಘ ಸಂಸ್ಥೆಗಳು ಪರಸ್ಪರ ಹೊಂದಾಣಿಕೆಯಿಂದ, ಸಹಕಾರ ಮನೋಭಾವದಿಂದ ವ್ಯವಹರಿಸಿದರೆ ಮಾತ್ರ ಅವು ಲಾಭದಾಯಕವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಹಾಗೆ ಮಾಡದಿದ್ದರೆ ಖಾಸಗಿಯವರು ಯಶಸ್ಸು ಕಾಣುತ್ತಾರೆ.

ಇದರ ಹಿನ್ನೆಲೆಯಲ್ಲಿ ಅಮುಲ್ ಸಂಸ್ಥೆ ಮಾದರಿಯಾಗಿದೆ ಎನ್ನಬಹುದು. ಹಾಲು ಘಟಕಗಳು ಪರಸ್ಪರ ಸಹಕಾರದಿಂದ ವ್ಯವಹರಿಸಿ ತಮ್ಮ ಹಿತವನ್ನು ಕಾಯ್ದುಕೊಳ್ಳುತ್ತಿರುವುದು ಶ್ಲಾಘನೀಯವಾದುದಾಗಿದೆ. ಈ ವ್ಯವಸ್ಥೆಯನ್ನು ಉಳಿದ ವಲಯದವರು ಅನುಕರಣೆ ಮಾಡಬಹುದು.

ಆರ್ಥಿಕ ಬೆಳವಣಿಗೆಗೆ ಸಹಕಾರ ಸಂಸ್ಥೆಗಳ ನಡುವೆ ಸಹಕಾರ ಅತ್ಯಂತ ಪ್ರಮುಖವಾದುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವಿದೆ. ಕೊರೋನಾ ಸಂದರ್ಭದಲ್ಲಿ ಇದು ಮತ್ತಷ್ಟು ಆದ್ಯತೆಯ ವಿಷಯವಾಗಿದೆ.

**ಸಪ್ತಾಹದ ಆಚರಣೆ ಸಂದರ್ಭದಲ್ಲಿ :**

- ಕೊರೋನಾ ಪಿಡುಗಿಗೆ ಸಂಬಂಧಿಸಿದಂತೆ ಪರಸ್ಪರ ಸಹಕಾರ ಕುರಿತು ಸಭೆ, ಸಮ್ಮೇಳನ, ವಿಚಾರಗೋಷ್ಠಿಗಳನ್ನು ವ್ಯವಸ್ಥೆ ಮಾಡಬಹುದು.
- ಪ್ರಬಂಧ, ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸಬಹುದು.
- ಪರಸ್ಪರ ಸಹಕಾರದ ಪ್ರಾಮುಖ್ಯತೆ ಕುರಿತು ವ್ಯಾಪಕ ಪ್ರಚಾರ ಮಾಡಬಹುದು.

## ದಿನಾಂಕ : 18-11-2020 ಬುಧವಾರ
## ವ್ಯವಹಾರ, ಉದ್ಯೋಗ ಕಳೆದುಕೊಂಡವರು, ಬಾಧಿತರು ಪುನರುದ್ಯೋಗಸ್ಥರಾಗಲು ಕೌಶಲ್ಯಾಭಿವೃದ್ಧಿ ದಿನ

ಕೊರೋನಾ ಸೋಂಕು ತಮ್ಮ ಪರಿಸರ ಮತ್ತು ಪರಿಸ್ಥಿತಿಯಲ್ಲಿ ಬಹಳಷ್ಟು ಅಪ್ರಸ್ತುತತೆಯನ್ನು ಸೃಷ್ಟಿಸಿದೆ. ಈ ಪರಿಸ್ಥಿತಿಯಲ್ಲಿ ಆರ್ಥಿಕ - ಸಾಮಾಜಿಕ ವ್ಯವಸ್ಥೆಯನ್ನು ಬಲಪಡಿಸಬೇಕಾದ ಅಗತ್ಯತೆ ಕಂಡುಬಂದಿದೆ. ಇದಕ್ಕೆ ಪೂರಕವಾಗಿ ಸಹಕಾರಿ ಸಂಸ್ಥೆಗಳನ್ನು ದೃಢಗೊಳಿಸಬೇಕಿದೆ. ಸಹಕಾರ ಸಂಸ್ಥೆಗಳಲ್ಲಿನ ಮಹಿಳೆಯರಲ್ಲಿ ಯುವಜನರಲ್ಲಿ, ರೈತರಲ್ಲಿ ಉದ್ಯೋಗಾಕಾಂಕ್ಷೆಯನ್ನು ಪ್ರೇರೇಪಿಸುವ ಮೂಲಕ ಸಂಸ್ಥೆಗಳನ್ನು ಬಲಪಡಿಸಲು ಸಾಧ್ಯವಾಗುತ್ತದೆ. ಉದ್ಯೋಗವಕಾಶವನ್ನು ಹೆಚ್ಚಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿದೆ.

ಭಾರತದಲ್ಲಿ ಕೊರೋನಾ ಸಂದರ್ಭದಲ್ಲಿ ಉದ್ಯೋಗವಕಾಶಗಳ ಸೃಷ್ಟಿ ಮತ್ತು ಸಾಮಾಜಿಕ ಭದ್ರತೆಯನ್ನುಂಟು ಮಾಡುವುದೇ ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಕೊರೋನಾ ಸಂದರ್ಭದಲ್ಲಿ ಸಹಕಾರ ಸಂಸ್ಥೆಗಳ ತಮ್ಮ ಸದಸ್ಯರ ಬಲಸಂವರ್ಧನೆಗೆ ಹೆಚ್ಚಿನ ಒತ್ತು ನೀಡುವುದು ಅಗತ್ಯ ಎನಿಸುತ್ತದೆ. ಸ್ವಉದ್ಯೋಗ ಸೃಷ್ಟಿ, ಸ್ವ-ಜವಾಬ್ದಾರಿ, ಸ್ವಸಹಾಯಕ್ಕೆ ಪ್ರಾಮುಖ್ಯತೆ ನೀಡಬೇಕಾದುದು ಕೊರೋನಾ ಸಂದರ್ಭದಲ್ಲಿ ಅಗತ್ಯ ಎನಿಸುತ್ತದೆ. ಗ್ರಾಮೀಣ ಭಾಗದಲ್ಲಿ ರೈತರು, ಯುವಜನರು ಕ್ರಿಯಾಶೀಲರಾಗಿ ಅಧಿಕ ಉತ್ಪನ್ನಕ್ಕಾಗಿ ಶ್ರಮಿಸುವಂತೆ ಪ್ರೇರೇಪಿಸುವ ಅಗತ್ಯವಿದೆ. ಇದರಿಂದ ವರ್ಷಕ್ಕೆ 1 ಲಕ್ಷ ಕೋಟಿ ಸಂಪನ್ಮೂಲದಷ್ಟು ಜಿ.ಡಿ.ಪಿ.ಗೆ ಸೇರಿಸಲು ಸಾಧ್ಯವಾಗಲಿದೆ.

8 ಲಕ್ಷ ಸಹಕಾರ ಸಂಸ್ಥೆಗಳು ರಾಷ್ಟ್ರದ 90 ರಷ್ಟು ಗ್ರಾಮಗಳನ್ನು ಆವರಿಸಿಕೊಂಡಿದ್ದು, ಅವುಗಳ ಸದಸ್ಯರ ಆರ್ಥಿಕ ಬೆಳವಣಿಗೆಗೆ ಶ್ರಮಿಸುತ್ತಾ ಬಂದಿವೆ. ಹೈನುಗಾರಿಕೆ ಸಾಲ, ಕೃಷಿ ಸಾಲ ಸಹಕಾರ ಸಂಘಗಳು, ಮೀನುಗಾರರ ಸಹಕಾರ ಸಂಘಗಳು, ವಿಮಾ ಸಹಕಾರ ಸಂಘಗಳು ಉಪಯುಕ್ತ ಕಾರ್ಯ ಮಾಡುತ್ತಿವೆ. ಲಕ್ಷಾಂತರ ವಲಸೆ ಕಾರ್ಮಿಕರು ಉದ್ಯೋಗ ಕಳೆದುಕೊಂಡು ಕಷ್ಟದಲ್ಲಿರುವಾಗ ಸರ್ಕಾರಗಳು ರೂಪಿಸುವ ಉದ್ಯೋಗ ಯೋಜನೆಗಳ ಕಾರ್ಯಗತದಲ್ಲಿ ಸಹಕಾರ ಸಂಸ್ಥೆಗಳು ಪರಿಣಾಮಕಾರಿ ಪಾತ್ರ ವಹಿಸಬಹುದಾಗಿದೆ. ಇವೆಲ್ಲದರ ನಡುವೆ ಕೌಶಲ್ಯಾಭಿವೃದ್ಧಿಗೆ ಆದ್ಯತೆ ನೀಡುವ ಅಗತ್ಯವಿದೆ.

ಪ್ರಧಾನಿ ಅವರು ಕೌಶಲ್ಯಾಭಿವೃದ್ಧಿಗೆ ಒತ್ತು ನೀಡಲು ಕರೆಕೊಟ್ಟಿದ್ದಾರೆ. ಕೌಶಲ್ಯಾಭಿವೃದ್ಧಿಯಿಂದ ಗ್ರಾಮೀಣ ಜನರ ಆದಾಯ ವೃದ್ಧಿಗೆ ದೊಡ್ಡ ಕೊಡುಗೆ ನೀಡಬಹುದಾಗಿದೆ. ಈ ದಿಸೆಯಲ್ಲಿ ನಬಾರ್ಡ್ ನೂತನ ಯೋಜನೆಯನ್ನು ಜಾರಿಗೆ ತರಲಿದೆ. ವಲಸೆ ಕಾರ್ಮಿಕರ ಉದ್ಯೋಗಕ್ಕಾಗಿ ಕೇಂದ್ರ ಸರ್ಕಾರ ಕೋಟ್ಯಂತರ ರೂ.ಗಳ ಹಲವಾರು ಯೋಜನೆಗಳನ್ನು ರೂಪಿಸಿದೆ. ಸಹಕಾರ ಸಂಸ್ಥೆಗಳು ಅವುಗಳ ಪ್ರಯೋಜನವನ್ನು ಫಲಾನುಭವಿಗಳಿಗೆ ತಲುಪಿಸುವ ಕೆಲಸದಲ್ಲಿ ತೊಡಗಿಕೊಳ್ಳಬೇಕು.

**ಸಪ್ತಾಹದ ಅವಧಿಯಲ್ಲಿ :**

- ಪುನರ್ ಉದ್ಯೋಗಸೃಷ್ಟಿಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಕುರಿತು ವಿಚಾರಗೋಷ್ಠಿಗಳನ್ನು ವ್ಯವಸ್ಥೆ ಮಾಡಬಹುದು.
- ಸರ್ಕಾರದ ಯೋಜನೆಗಳ ಕಾರ್ಯಗತದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಕುರಿತು ಚಿಂತನ-ಮಂಥನ ನಡೆಸಬಹುದು.
- ಸಹಕಾರ ಸಂಸ್ಥೆಗಳ ಯಶೋಗಾಥೆಗಳನ್ನು ಪ್ರಕಟಿಸಬಹುದು.

## ದಿನಾಂಕ : 19-11-2020 ಗುರುವಾರ
## ಯುವಜನ, ಮಹಿಳಾ ಮತ್ತು ಅಬಲವರ್ಗದವರಿಗಾಗಿ ಸಹಕಾರ ಸಂಸ್ಥೆಗಳು ದಿನ

ಯಾವುದೇ ಚಳವಳಿ ಯಶಸ್ವಿಯಾಗಬೇಕಾದರೆ ಚಳವಳಿಯಲ್ಲಿ ಮಹಿಳೆಯರು ಮತ್ತು ಯುವಜನರು ಪಾಲ್ಗೊಳ್ಳುವುದು ಅತೀ ಮುಖ್ಯವಾಗಿರುತ್ತದೆ. ಇದು ಆರ್ಥಿಕ, ಸಾಮಾಜಿಕ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಸಹಕಾರ ಚಳವಳಿಗು ಅನ್ವಯವಾಗುತ್ತದೆ. ಅದರಲ್ಲೂ ಕೊರೋನಾ ಸೋಂಕಿನ ಹಿನ್ನೆಲೆಯಲ್ಲಿ, ಸಹಕಾರ ಚಳವಳಿ ಹೊಸ ಆವಿಷ್ಕಾರವನ್ನು, ಹೊಸ ಆಯಾಮವನ್ನು ಹೊಂದಬೇಕಿರುವಾಗ ಮಹಿಳೆಯರು ಮತ್ತು ಯುವಜನರು ದೊಡ್ಡ ಕೊಡುಗೆಯನ್ನು ನೀಡಬಲ್ಲರು. ಇದರ ಹಿನ್ನೆಲೆಯಲ್ಲಿ ಯುವಕರನ್ನು ಸಹಕಾರಿ ವ್ಯವಸ್ಥೆಯತ್ತ ಸೆಳೆಯುವ ಬಗೆ ಹೇಗೆ? ಎಂಬುದನ್ನು ಚಿಂತಿಸಬೇಕಾಗುತ್ತದೆ. ಸಹಕಾರಿ ಉತ್ಪನ್ನಗಳಿಗೆ "ಬ್ರಾಂಡ್" ಮೌಲ್ಯವನ್ನು ತುಂಬುವ ಮೂಲಕ ಯುವಜನರನ್ನು ಆಕರ್ಷಿಸಬಹುದಾಗಿದೆ. ಯುವಜನರನ್ನು ಬ್ರಾಂಡ್ ಅಂಬಾಸಿಡರ್ ಆಗಿ ನೇಮಕಗೊಂಡವರು ಸೆಳೆಯಬಹುದಾಗಿದೆ.

ಸಹಕಾರ ವಿಷಯವನ್ನು ಶಾಲಾ-ಕಾಲೇಜುಗಳಲ್ಲಿ ಆಕರ್ಷಕವಾಗುವಂತೆ ಮಾಡಲು ಸಾಧ್ಯವಿದೆ. ಅದರಿಂದ ಯುವಜನರಿಗೆ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುತ್ತದೆ. ಇದರಿಂದ ನಿರುದ್ಯೋಗಿ ಯುವಜನರಲ್ಲಿ ಹೊಸ ಉತ್ಸಾಹವನ್ನು ಉಂಟುಮಾಡಿದಂತಾಗುತ್ತದೆ. ಪ್ರಸ್ತುತ ವಿಶ್ವವಿದ್ಯಾಲಯಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಸಹಕಾರ ಪಠ್ಯ ವಿಷಯವಾಗಿಲ್ಲದಿರುವುದರಿಂದ ಆ ಬಗ್ಗೆ ಯುವಕರು ಆಕರ್ಷಿತರಾಗುತ್ತಿಲ್ಲ. ಈ ಬಗ್ಗೆ ಆಳವಾದ ಚಿಂತನೆ ಮಾಡಬೇಕಾಗಿದೆ.

ಇದನ್ನೇ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯೂ ಶಿಫಾರಸು ಮಾಡಿದೆ. ಮಹಿಳೆಯರು ಇಂದಿಗೂ ಸಹಕಾರ ಸಂಸ್ಥೆಗಳಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿಲ್ಲ. ಹಾಗೆ ಮಹಿಳೆಯರು ಪ್ರಮುಖ ಪಾತ್ರ ವಹಿಸುವಂತಿದ್ದರೆ ಅವರಲ್ಲಿ ಉತ್ಸಾಹವನ್ನು ತುಂಬಿ ಅವರಿಂದ ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಅಗತ್ಯ ಕೊಡುಗೆಯನ್ನು ಪಡೆಯಲು ಸಾಧ್ಯವಾಗುತ್ತಿತ್ತು. ಮಹಿಳೆಯರಿಗೆ ನಿರ್ಧಾರಗಳನ್ನು ಕೈಗೊಳ್ಳುವ ಅವಕಾಶವುಳ್ಳ ಸ್ಥಾನಗಳು ದೊರಕಬೇಕು. ಪ್ರಪಂಚದಾದ್ಯಂತ ಮಹಿಳೆಯರು ನಿರ್ಧಾರಗಳನ್ನು ಕೈಗೊಳ್ಳುವ, ನಿರ್ಣಾಯಕ ಸ್ಥಾನಗಳನ್ನು ಹೊಂದಿರುವೆಡೆ ಸಹಕಾರ ಸಂಸ್ಥೆಗಳು ಪ್ರಗತಿದಾಯಕವಾಗಿ ನಡೆದಿರುವುದನ್ನು, ಸದಸ್ಯರಿಗೆ ಅಗತ್ಯ ಅನುಕೂಲಗಳು ಸಿಕ್ಕಿರುವುದನ್ನು ಕಾಣಬಹುದು.

ಭಾರತದಲ್ಲಿನ ಜನ ಸಂಖ್ಯೆಯಲ್ಲಿ ಶೇ. 48 ರಷ್ಟು ಮಹಿಳೆಯರು, ಶೇ.35ರಷ್ಟು ಯುವಜನರು ಇರುವಾಗ ಸಹಕಾರ ಸಂಸ್ಥೆಗಳಲ್ಲಿ ಮಹಿಳೆಯರು ಮತ್ತು ಯುವಜನರಿಗೆ ಜವಾಬ್ದಾರಿಯುತ ಸ್ಥಾನಗಳು ದೊರೆಯುವಂತಾಗಬೇಕು.

ಸಹಕಾರಾಭಿವೃದ್ಧಿಗೆ ಸಮಾಜದ ಅಬಲವರ್ಗವೂ ಪ್ರಮುಖ ಪಾತ್ರ ನಿರ್ವಹಿಸಬಲ್ಲದು. ಇತ್ತೀಚಿನ ದಿನಗಳಲ್ಲಿ ಮೀನುಗಾರ ಸಹಕಾರ ಸಂಘಗಳು, ಗುಡ್ಡಗಾಡು ಜನರ ಸಹಕಾರ ಸಂಘಗಳು ಬಲಯುತವಾಗಿರುವುದು ಕಂಡು ಬರುತ್ತಿದೆ. ಸಹಕಾರ ಸಂಸ್ಥೆಗಳಲ್ಲಿ ಹೆಚ್ಚಿನ ಸಂಖ್ಯೆಯ ಪರಿಶಿಷ್ಟ ಜಾತಿ– ಪಂಗಡದವರೂ ಪಾಲ್ಗೊಳ್ಳುತ್ತಿರುವುದು ಆಶಾದಾಯಕ ಎನಿಸಿದೆ.

**ಸಪ್ತಾಹದ ಅಭಿವೃದ್ಧಿಯಲ್ಲಿ :**

- ಯುವಜನ–ಮಹಿಳೆಯರು, ಅಬಲವರ್ಗದವರು ಸಹಕಾರ ವ್ಯವಸ್ಥೆಯಡಿ ಬರಲು ಸಾಧ್ಯವಾಗುವಂತೆ ವಿಚಾರಗೋಷ್ಠಿ, ಚಿಂತನ–ಮಂಥನ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಬಹುದು.
- ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಕ್ವಿಜ್ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಬಹುದು.
- ಸಾಮಾಜಿಕ ಮಾಧ್ಯಮ ಮತ್ತು ವೀಡಿಯೋ ಸ್ಪರ್ಧೆಗಳನ್ನು ವ್ಯವಸ್ಥೆ ಮಾಡಿದಲ್ಲಿ ಹೆಚ್ಚಿನ ಸಂಖ್ಯೆಯ ಯುವಜನರು ಪಾಲ್ಗೊಳ್ಳಲು ಸಾಧ್ಯವಾಗಲಿದೆ.

## ದಿನಾಂಕ : 20–11–2020 ಶುಕ್ರವಾರ
## ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ, ಡಿಜಿಟಲೈಜೇಷನ್ ಮತ್ತು ಸಾಮಾಜಿಕ ಜಾಲತಾಣ ದಿನ

ಭಾರತದಲ್ಲಿ 8 ಲಕ್ಷ ಸಹಕಾರಿ ಸಂಘ ಸಂಸ್ಥೆಗಳಿದ್ದು, ಆರ್ಥಿಕ ಸಾಮಾಜಿಕ ಬೆಳವಣಿಗೆಗೆ ಅಹರ್ನಿಶಿ ಶ್ರಮಿಸುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಭಾರತ 2024 ರ ವೇಳೆಗೆ 5 ಟ್ರಿಲಿಯನ್ ಮೊತ್ತದ ಆರ್ಥಿಕ ಚಟುವಟಿಕೆ ನಡೆಸುವ ಗುರಿ ಹೊಂದುವ ಸಂದರ್ಭದಲ್ಲಿ ಆಧುನಿಕ ತಂತ್ರಜ್ಞಾನದಿಂದ ಕೂಡಿದ ಡಿಜಿಟಲೈಜೇಷನ್‌ಗೆ ಸಹಕಾರಿ ಸಂಸ್ಥೆಗಳು ಪರಿವರ್ತನೆಗೊಳ್ಳಬೇಕಾದ ಅಗತ್ಯವಿದೆ. ಸಹಕಾರ ಸಂಸ್ಥೆಗಳ ಆಡಳಿತ ವಿಧಾನ ಆಧುನೀಕರಣಗೊಳ್ಳಬೇಕಾದ ಸಂದರ್ಭದಲ್ಲಿ ಹಲವಾರು ಸವಾಲುಗಳನ್ನು ಎದುರಿಸುತ್ತಿವೆ.

**ಸಹಕಾರಿ ಬ್ಯಾಂಕುಗಳಲ್ಲಿ ಡಿಜಿಟಲೈಜೇಷನ್ :**

ಸಹಕಾರಿ ಬ್ಯಾಂಕುಗಳು ಶೀಘ್ರವಾಗಿ ಡಿಜಿಟಲ್ ಆರ್ಥಿಕತೆಗೆ ಹೊಂದಿಕೊಳ್ಳಲಾರಂಭಿಸಿವೆ. ಬ್ಯಾಂಕುಗಳಲ್ಲಿ ಕೋರ್ ಬ್ಯಾಂಕಿನ ವ್ಯವಸ್ಥೆಯಿಂದ ಸದಸ್ಯರ, ಗ್ರಾಹಕರ ಅಗತ್ಯಗಳನ್ನು ಶೀಘ್ರದಲ್ಲಿ ಒದಗಿಸಲು ಸಮರ್ಥ ಎನಿಸಿವೆ. ಬ್ಯಾಂಕುಗಳ ವ್ಯವಹಾರದಲ್ಲಿ ಕಾಗದ ಬಳಕೆ, ವೆಚ್ಚ ಉಳಿತಾಯ, ಗ್ರಾಹಕ ಅನುಭವಕ್ಕೆ ಆದ್ಯತೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಕೇಂದ್ರ ಸರ್ಕಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಗಣಕೀಕರಣ ವ್ಯವಸ್ಥೆಗಾಗಿ 1900 ಕೋಟಿ ರೂ.ಗಳ ನೆರವನ್ನು ನೀಡುವ ಭರವಸೆ ಇತ್ತಿದೆ. ವಾಣಿಜ್ಯ ಬ್ಯಾಂಕುಗಳಲ್ಲಿನ ಆಧುನಿಕ ವ್ಯವಸ್ಥೆಯನ್ನು ಸಹಕಾರಿ ಸಂಸ್ಥೆಗಳಿಗೂ ಒದಗಿಸುವುದು ಸರ್ಕಾರದ ಆಶಯ ಎಂಬುದು ಇದರಿಂದ ತಿಳಿದುಬರುತ್ತದೆ. ಸಮಾಜದ ಆರ್ಥಿಕ ಒಳಿತಿಗೆ ಸಹಕಾರ ಸಂಸ್ಥೆಗಳಲ್ಲಿ ಆರ್ಥಿಕ ಸೇರ್ಪಡೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಆರ್ಥಿಕ ಸೇರ್ಪಡೆಯಲ್ಲಿ ಸಹಕಾರಿ ಬ್ಯಾಂಕುಗಳು ಪ್ರಧಾನ ಪಾತ್ರ ವಹಿಸುತ್ತಿವೆ. ಸಹಕಾರ ಬ್ಯಾಂಕುಗಳ ಸಹಕಾರ ತತ್ವವನ್ನು ನಿಷ್ಠಬದ್ಧವಾಗಿ ಅನುಸರಿಸುತ್ತಿರುವುದನ್ನು ಕಾಣಬಹುದಾಗಿದೆ. ಬೆಳವಣಿಗೆಗೆ ಡಿಜಿಟಲೈಜೇಷನ್ ಮಹತ್ತರವಾದುದೆಂಬುದನ್ನು ಅರಿಯಬೇಕಾಗಿದೆ. ಸಹಕಾರ ಸಂಸ್ಥೆಗಳು ಡಿಜಿಟಲೈಜೇಷನ್ ಮೂಲಕ ಗ್ರಾಮೀಣ ಜನರನ್ನು ತಲುಪಲು ಸಾಧ್ಯವಾಗಲಿದೆ. ಈ ದಿಸೆಯಲ್ಲಿ ಜಾರ್ಖಂಡ್ ರಾಜ್ಯ ಮಾದರಿ ಎನಿಸಿದೆ.

**ಸಹಕಾರ ಸಂಸ್ಥೆಗಳು ಮತ್ತು ಸಾಮಾಜಿಕ ಜಾಲತಾಣ :**

ಸಮಾಜದ ಜನರ ಹಿತ ಕಾಯುವಲ್ಲಿ ಸಹಕಾರ ಸಂಸ್ಥೆಗಳು ಸಾಮಾಜಿಕ ಜಾಲತಾಣವನ್ನು ಅವಲಂಬಿಸಬೇಕಾಗಿದೆ. ಸಹಕಾರ ಸಂಸ್ಥೆಗಳು ತಮ್ಮ ಸಂಪರ್ಕವನ್ನು ವೃದ್ಧಿಸಿಕೊಳ್ಳಲು ಫೇಸ್‌ಬುಕ್, ಟ್ವಿಟರ್‌ಗಳನ್ನು ಬಳಸಿಕೊಳ್ಳಬಹುದಾಗಿದೆ. ಇದರಿಂದ ಸಹಕಾರ ಸಂಸ್ಥೆಗಳು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಸಾಧ್ಯವಾಗಲಿದೆ. ಸಹಕಾರ ಸಂಸ್ಥೆಗಳು ಪರಿಸರ ಸಂರಕ್ಷಣೆ, ಬಡತನ ನಿವಾರಣೆ, ಲಿಂಗ ಸಮಾನತೆ ಕುರಿತಂತೆಯೂ ಹೆಚ್ಚು ಪ್ರಚಾರ ನೀಡಬೇಕಾದ ಅಗತ್ಯವಿದೆ.

**ಸಪ್ತಾಹದ ಸಂದರ್ಭದಲ್ಲಿ :**

- ಆರ್ಥಿಕ ಸೇರ್ಪಡೆ ಕುರಿತು ವಿಚಾರ ಸಂಕಿರಣಗಳನ್ನು, ಸಮಾವೇಶಗಳನ್ನು ವ್ಯವಸ್ಥೆ ಮಾಡಬಹುದು.
- ಸಾಮಾಜಿಕ ಮಾಧ್ಯಮ ಕುರಿತು ತರಬೇತಿ ಕಾರ್ಯಕ್ರಮಗಳ ವ್ಯವಸ್ಥೆ ಮಾಡಬಹುದು.
- ಸಾಮಾಜಿಕ ಮಾಧ್ಯಮ, ಡಿಜಿಟಲೈಜೇಷನ್, ಆರ್ಥಿಕ ಸೇರ್ಪಡೆ ಕುರಿತು ಉತ್ತಮ ಕೆಲಸ ಮಾಡುತ್ತಿರುವ ಸಂಸ್ಥೆಗಳನ್ನು ಗೌರವಿಸಬಹುದು.
- ಯುವಜನರಿಗೆ, ವಿದ್ಯಾರ್ಥಿಗಳಿಗೆ ಸಾಮಾಜಿಕ ಮಾಧ್ಯಮ ಕುರಿತ ಸ್ಪರ್ಧೆಗಳನ್ನು ಏರ್ಪಡಿಸಬಹುದು.

**ಮಾಹಿತಿ : ಎಂ. ಮಹೇಶ್‌ಕುಮಾರ್**

# ವಾರ್ಷಿಕ ಲೆಕ್ಕಪರಿಶೋಧನಾ ವರದಿ ಸಲ್ಲಿಸಲು ಅವಧಿ ವಿಸ್ತರಣೆ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ : ಸಹಕಾರ ಸಂಘಗಳ ಮತ್ತು ಸೌಹಾರ್ದ ಸಹಕಾರಿಗಳ 2019–20ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಲು ಕಾಲಾವಧಿಯನ್ನು ವಿಸ್ತರಣೆ ಮಾಡುವ ಕುರಿತು.**

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಸಇ 33 ಸಿಎಲ್ಎಂ 2020 (ಇ), ದಿನಾಂಕ: 17.04.2020.
2. ಸರ್ಕಾರದ ಆದೇಶ ಸಂಖ್ಯೆ: ಸಇ 34 ಸಿಎಲ್ಎಂ 2020 (ಇ), ದಿನಾಂಕ: 17.04.2020.
3. ಸರ್ಕಾರದ ಆದೇಶ ಸಂಖ್ಯೆ: ಸಇ 43 ಸಿಎಲ್ಎಂ 2020 (ಇ), ದಿನಾಂಕ: 24.06.2020.
4. ಸರ್ಕಾರದ ಆದೇಶ ಸಂಖ್ಯೆ: ಸಇ 44 ಸಿಎಲ್ಎಂ 2020 (ಇ), ದಿನಾಂಕ: 08.07.2020.
5. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಕರ್ನಾಟಕ ರಾಜ್ಯ ಬೆಂಗಳೂರು ಇವರ ಪತ್ರ **ಸಂಖ್ಯೆ: ಲೆಪಶಾ/ಇತರೆ/ಸಸಂಲೆಪನೆಅವಿ/02/2020–21, ದಿನಾಂಕ: 20.10.2020.**

**ಪ್ರಸ್ತಾವನೆ :**

ಮೇಲೆ ಓದಲಾದ (1) ಮತ್ತು (2) ರಲ್ಲಿ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯ್ದೆ–2012ರ ಕಲಂ 63(8) ಹಾಗೂ ನಿಯಮ 29(ಬಿ)7 ರನ್ವಯ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಕಾಯ್ದೆ 2013ರ ಕಲಂ 33(8) ರನ್ವಯ ಲೆಕ್ಕ ಪರಿಶೋಧಕರು ಸಂಘಕ್ಕೆ, ಸಹಕಾರ ಸಂಘಗಳ ನಿಬಂಧಕರಿಗೆ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಹಾಗೂ ಆರ್ಥಿಕ ಸಹಾಯ ಒದಗಿಸುವ ಸಂಸ್ಥೆಗಳಿಗೆ ಲೆಕ್ಕ ಪರಿಶೋಧನಾ ವರದಿಯನ್ನು 1ನೇ ಸೆಪ್ಟೆಂಬರ್ ಒಳಗಾಗಿ ಸಲ್ಲಿಸಬೇಕಾದ ಅವಧಿಯನ್ನು 1ನೇ ನವೆಂಬರ್‌ವರೆಗೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (3) ಮತ್ತು (4) ರಲ್ಲಿ ರಾಜ್ಯದಲ್ಲಿ ಕೋವಿಡ್–19 ವ್ಯಾಪಕವಾಗಿ ಹರಡುತ್ತಿರುವುದರಿಂದ ಸಹಕಾರಿ ಸಂಘಗಳ ಮತ್ತು ಸೌಹಾರ್ದ ಸಹಕಾರಿಗಳ ವಾರ್ಷಿಕ ಮಹಾಸಭೆ ನಡೆಸುವ ಅವಧಿಯನ್ನು ವಿಸ್ತರಿಸಿ ಡಿಸೆಂಬರ್ 25, 2020 ರವರೆಗೆ ನಡೆಸಲು ಅನುಮತಿ ನೀಡಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಪ್ರಕರಣ 27ಬಿ ರನ್ವಯ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 34 ಮತ್ತು 64ಎ ರೀತ್ಯಾ ವಿದ್ಯುಕ್ತ ವರದಿಗಳನ್ನು ಸಲ್ಲಿಸಲು 31ನೇ ಡಿಸೆಂಬರ್ 2020 ರವರೆಗೆ ಅವಧಿಯನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (5)ರ ಪತ್ರದಲ್ಲಿ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ ಇವರು ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಯನ್ನು ನಡೆಸಲು ಡಿಸೆಂಬರ್ 25 ರವರೆಗೆ ಅವಧಿ ವಿಸ್ತರಿಸಿ ಆದೇಶಿಸಿರುವುದರಿಂದ, ಲೆಕ್ಕಪರಿಶೋಧನಾ ವರದಿಗಳನ್ನು ಸಲ್ಲಿಸಬೇಕಾದ ಅವಧಿಯನ್ನು ದಿನಾಂಕ : 25.11.2020 ರವರೆಗೆ ವಿಸ್ತರಿಸಬಹುದಾಗಿದೆ ಎಂದು ಅಭಿಪ್ರಾಯಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 76 ಸಿಎಲ್ಎಮ್ 2020(ಇ), ಬೆಂಗಳೂರು, ದಿನಾಂಕ : 29.10.2020

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 121ರಡಿಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1960ರ ನಿಯಮ 29–ಬಿ(7)ಕ್ಕೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 70ರಡಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 33(8)ಕ್ಕೆ ವಿನಾಯಿತಿ ನೀಡಿ, ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಗಳನ್ನು ಲೆಕ್ಕಪರಿಶೋಧಕರು ಸಲ್ಲಿಸುವ ಕಾಲಾವಧಿಯನ್ನು ದಿನಾಂಕ: 25.11.2020 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
**ಮನೋರಮ ಡಿ.ಸಿ.**
ಸರ್ಕಾರದ ಅಧೀನ ಕಾರ್ಯದರ್ಶಿ–3,
ಸಹಕಾರ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ : ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವುದರಿಂದ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಮೂಲಕ ನಡೆಸುವ ಕುರಿತು.**

ಓದಲಾಗಿದೆ

1. ಸರ್ಕಾರದ ಆದೇಶ ಸಂಖ್ಯೆ : ಸಇ 43 ಸಿಎಲ್ಎಂ 2020 (ಇ), ದಿನಾಂಕ : 24.06.2020.
2. ಸರ್ಕಾರದ ಆದೇಶ ಸಂಖ್ಯೆ : ಸಇ 44 ಸಿಎಲ್ಎಂ 2020 (ಇ), ದಿನಾಂಕ : 08.07.2020.
3. ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಬೆಂಗಳೂರು ಇವರ ಪತ್ರ ಸಂಖ್ಯೆ : ಸಸಂನಿ/ಆರ್ಎಸ್ಆರ್/ಎಕ್ಸ್ಎಂಸಿ/11/2020–21, ದಿನಾಂಕ : 14.10.2020.

**ಪ್ರಸ್ತಾವನೆ :**

ಮೇಲೆ ಓದಲಾದ (1)ರಲ್ಲಿ ರಾಜ್ಯದಲ್ಲಿ ಕೋವಿಡ್–19 ರೋಗವು ವ್ಯಾಪಕವಾಗಿ ಹರಡುತ್ತಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯದೆ 1959ರ ಕಲಂ 121ರಡಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 27(1)ರಲ್ಲಿ ಸಹಕಾರ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ ಇಪ್ಪತ್ತೈದರೊಳಗಾಗಿ ನಡೆಸತಕ್ಕದ್ದು ಎಂಬುದನ್ನು ಸಡಿಲಿಸಿ 25ನೇ ಡಿಸೆಂಬರ್ 2020 ರೊಳಗಾಗಿ ನಡೆಸಲು ಹಾಗೂ ಮೇಲೆ ಓದಲಾದ (2)ರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 70 ರಡಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 27(ಹೆಚ್–3), 30(1) ಹಾಗೂ 60(1)ರಡಿ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು **ಸೆಪ್ಟೆಂಬರ್ ಇಪ್ಪತ್ತೈದರೊಳಗಾಗಿ ನಡೆಸತಕ್ಕದ್ದು ಎಂಬುದನ್ನು ಸಡಿಲಿಸಿ, 25ನೇ ಡಿಸೆಂಬರ್ 2020 ರೊಳಗಾಗಿ ನಡೆಸಲು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ.**

ಮೇಲೆ ಓದಲಾದ (3)ರಲ್ಲಿ ಸಹಕಾರಿ ಸಂಘಗಳ / ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು video conference / virtual meeting ಮೂಲಕ ನಡೆಸಲು ಈ ಕೆಳಕಂಡ ನಿಬಂಧನೆಗೊಳಪಟ್ಟು ಸರ್ಕಾರದ ನಿರ್ದೇಶನ ನೀಡುವಂತೆ ಸಹಕಾರ ಸಂಘಗಳ ನಿಬಂಧಕರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ಸಇ 43 ಸಿಎಲ್ಎಮ್ 2020(ಇ), ಬೆಂಗಳೂರು, ದಿನಾಂಕ : 21.10.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 121ರಡಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 70ರಡಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಹಾಗೂ ವಿಪತ್ತು ನಿರ್ವಹಣೆ ಅಧಿನಿಯಮ 2005 ರಡಿಯಲ್ಲಿ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 158 ಟಿಎನ್ಆರ್ 2020, ದಿನಾಂಕ: 01.10.2020ರ ಆದೇಶ/ಮಾರ್ಗಸೂಚಿಗಳನ್ನು ಮತ್ತು ಕೋವಿಡ್–19 ನಿರ್ವಹಣೆಗಾಗಿ ಹೊರಡಿಸಿದ ರಾಷ್ಟ್ರೀಯ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ ಸರ್ವ ಸದಸ್ಯರ ಸಭೆಯನ್ನು **video conference / virtual** ಮೂಲಕ ನಡೆಸಲು 2020ರ ಅವಧಿಗೆ ಮಾತ್ರ ಈ ಕೆಳಕಂಡ ನಿಬಂಧನೆಗೊಳಪಟ್ಟು ಅನುಮತಿ ನೀಡಿದೆ.

- ಸರ್ವ ಸದಸ್ಯರ ಸಭೆಯನ್ನು video conference / virtual meeting ಮೂಲಕ ನಡೆಸಬಹುದು.
- ಸರ್ವ ಸದಸ್ಯರ ಸಭೆ ನಡೆಯುವ ದಿನಾಂಕ ಮತ್ತು ವೇಳೆ ದಿನಪತ್ರಿಕೆಯಲ್ಲಿ ಪ್ರಕಟಿಸುವುದು.
- ಸಭೆಯ ನೋಟೀಸು ಹಾಗೂ ಇನ್ನಿತರೆ ದಾಖಲಾತಿಗಳನ್ನು ಸಂಘದ ವೆಬ್‌ಸೈಟ್ ಮೂಲಕ ಪ್ರಚುರಗೊಳಿಸುವುದು ಹಾಗೂ ಹಾಲಿ ಅನುಸರಿಸುತ್ತಿರುವ ಪದ್ಧತಿಯಂತೆ ನೋಟೀಸುಗಳನ್ನು ಅಂಚೆಯ ಮೂಲಕ ರವಾನಿಸಲು ಸಹ ಕ್ರಮವಿಡತಕ್ಕದ್ದು.
- ಇ–ಮೇಲ್ ಅಥವಾ ವೆಬ್‌ಸೈಟ್ ಹೊಂದಿಲ್ಲದವರು Remote e-voting system ಮೂಲಕ ಭಾಗವಹಿಸುವುದು.
- ಸದಸ್ಯರಿಗೆ ಡಿವಿಡೆಂಡ್‌ಗಳನ್ನು ಇಸಿಎಸ್ ಮೂಲಕ ಅವರುಗಳ ಖಾತೆಗೆ ಪಾವತಿಸಲು ಕ್ರಮವಿಡುವುದು.
- ಇಂತಹ ಸಭೆಯ ನಡವಳಿಗಳನ್ನು ಅಧಿಕೃತವಾಗಿ ರೆಕಾರ್ಡ್ ಮಾಡಿ ದಾಖಲಿಸುವ ತಂತ್ರಜ್ಞಾನ ಅಳವಡಿಸಿಕೊಳ್ಳತಕ್ಕದ್ದು.
- ಸರ್ವ ಸದಸ್ಯರ ಸಭೆ ನಡೆಸುವ ಸ್ಥಳದಲ್ಲಿ ಕೋವಿಡ್–19ರ ನಿಯಮಾವಳಿಗಳಿಗೆ ಒಳಪಟ್ಟು ಎಂದಿನಂತೆ ಹಾಜರಾತಿಯನ್ನು ನಿರ್ವಹಿಸಿ ಸಹಕಾರ ಸಂಘಗಳ ಕಾಯ್ದೆ ಅನ್ವಯ ನಮೂದಿಸಿರುವ ಅಂಶಗಳನ್ನು ಕಾರ್ಯಸೂಚಿಯಲ್ಲಿ ಅಳವಡಿಸಿಕೊಂಡು ಹಾಲಿ ಪದ್ಧತಿಯಂತೆ ನಡವಳಿಗಳನ್ನು ನಡೆಸಲು ಕ್ರಮವಹಿಸತಕ್ಕದ್ದು.

ಸರ್ವ ಸದಸ್ಯರ ಸಭೆಯನ್ನು video conference / virtual meeting ಮೂಲಕ ನಡೆಸಲು ವ್ಯವಸ್ಥೆ ಇಲ್ಲದೇ ಇರುವಂತಹ ಸಹಕಾರ ಸಂಘಗಳು / ಸೌಹಾರ್ದ ಸಹಕಾರಿಗಳು ಸರ್ಕಾರದ ಆದೇಶ ಸಂಖ್ಯೆ : ಸಇ 43 ಸಿಎಲ್ಎಂ 2020 (ಇ), ದಿನಾಂಕ : 24.06.2020 ಹಾಗೂ ಸರ್ಕಾರದ ಆದೇಶ ಸಂಖ್ಯೆ : ಸಇ 44 ಸಿಎಲ್ಎಂ 2020 (ಇ), ದಿನಾಂಕ : 08.07.2020 ರನ್ವಯ ಕ್ರಮ ಕೈಗೊಳ್ಳಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.

ಸಹಿ/–

**ಕೆ.ಎಂ. ಆಶಾ**

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

## ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸ್ಥಾಪಕ ಮಾಜಿ ನಿರ್ದೇಶಕ "ಎಂ. ನಿಂಗೇಗೌಡ ನಿಧನ"



**ಬೆಂಗಳೂರು** : ಇತ್ತೀಚೆಗೆ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇದರ ಪ್ರವರ್ತಕರು ಹಾಗೂ ಸ್ಥಾಪಕ ನಿರ್ದೇಶಕರು ಆದ ಶ್ರೀ ಎಂ.ನಿಂಗೇಗೌಡ ರವರು ದಿನಾಂಕ : 09-10-2020ರಂದು ದೈವಾಧಿನರಾದ್ದಾರೆ.

ಶ್ರೀಯುತರು ಇದಕ್ಕೂ ಮೊದಲು ರಾಜ್ಯ ಒಕ್ಕಲಿಗರ ಸಂಘದಲ್ಲಿ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುತ್ತಾರೆ ಸಹಕಾರ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿರುವ ಇವರು ಅನೇಕ ಸಹಕಾರ ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದು ಬೆಂಗಳೂರಿನ "ಲೋಕ ಪಾವನಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷರಾಗಿ, ಸುವರ್ಣ ಕರ್ನಾಟಕ ಗೃಹ ನಿರ್ಮಾಣ ಸಹಕಾರ ಸಂಘದ ಸ್ಥಾಪಕ ನಿರ್ದೇಶಕರಾಗಿ ಹಾಗೂ ಹಾಲಿ ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಇದರ ಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿರುತ್ತಾರೆ.

ಇವರ ಸೇವೆಗಳನ್ನು ಪರಿಗಣಿಸಿ ಮಹಾಮಂಡಳದ ವತಿಯಿಂದ "ಉತ್ತಮ ಸಹಕಾರಿ" ಪ್ರಶಸ್ತಿ ನೀಡಿ ಗೌರವಿಸಲಾಗಿರುತ್ತದೆ. ಶ್ರೀಯುತರ ನಿಧನಕ್ಕೆ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತಮಂಡಳಿ ಸದಸ್ಯರು ಮತ್ತು ಸಿಬ್ಬಂದಿವರ್ಗ ಸಂತಾಪ ಸೂಚಿಸಿದ್ದಾರೆ.



## "ಭೈರಣ್ಣ ನಿಧನ"

**ಬೆಂಗಳೂರು** : ಬೆಂಗಳೂರಿನ ಜನಹಿತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದ ಭೈರಣ್ಣ ಅವರು ಇತ್ತೀಚೆಗೆ ನಿಧನರಾದರು. ವಿವಿಧ ಸಂಘ ಸಂಸ್ಥೆಗಳ ಅಭಿವೃದ್ಧಿಗೆ ಶ್ರಮಿಸಿದ್ದರು. ಇವರ ನಿಧನಕ್ಕೆ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತ ಮಂಡಳಿ ಸದಸ್ಯರು, ಜನಹಿತ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ಸದಸ್ಯರು ಸಂತಾಪ ಸೂಚಿಸಿದ್ದಾರೆ.

## "ಮೊಹಮ್ಮದ್ ಜಫರುಲ್ಲಾ ಖಾನ್ ನಿಧನ"



**ಬೆಂಗಳೂರು** : ಸಹಕಾರ ಸಂಘಗಳ ಅಪರ ನಿಬಂಧಕರಾಗಿದ್ದ ಮೊಹಮ್ಮದ್ ಜಫರುಲ್ಲಾ ಖಾನ್ ಅವರು ಅನಾರೋಗ್ಯ ಕಾರಣಗಳಿಂದ ಅಕ್ಟೋಬರ್ 12 ರಂದು ನಿಧನರಾದರು. ಶ್ರೀಯುತರ ನಿಧನಕ್ಕೆ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತಮಂಡಳಿ ಸದಸ್ಯರು ಸಂತಾಪ ಸೂಚಿಸಿದ್ದಾರೆ. ಮೊಹಮ್ಮದ್ ಜಫರುಲ್ಲಾ ಖಾನ್ ಅವರು 1997ರಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರಾಗಿ ನೇಮಕಗೊಂಡು ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಕೆ.ಎ.ಟಿ. – ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ ಸದಸ್ಯರಾಗಿದ್ದರು.

## ರಾಜ್ಯಕ್ಕೆ ಕೇಂದ್ರದ ಸಾಲ ಯೋಜನೆಯಡಿ ರೂ.6,000 ಕೋಟಿ ಬಿಡುಗಡೆ

**ನವದೆಹಲಿ** : 2020-2021ನೇ ಸಾಲಿಗೆ ಜಿಎಸ್‌ಟಿ ಪರಿಹಾರದ ಕೊರತೆಯನ್ನು ನೀಗಿಸಲು ಕೇಂದ್ರ ಸರ್ಕಾರ ವಿಶೇಷ ಯೋಜನೆ ಅಡಿ ಸಾಲ ಮಂಜೂರು ಮಾಡಿದೆ. ಈ ಮೂಲಕ ಕರ್ನಾಟಕ ಸೇರಿ 16 ರಾಜ್ಯಗಳಿಗೆ ಮೊದಲ ಕಂತಿನಲ್ಲಿ 6,000 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.



# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳವಳಿಯ ಉಗಮ

**ಲೇಖನ : ಬಸವೇಗೌಡ, ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು**

...ಹಿಂದಿನ ಸಂಚಿಕೆಯಿಂದ

**ಡೆನ್ಮಾರ್ಕ್‌ನಲ್ಲಿ ಸಹಕಾರ ಚಳವಳಿಯ ಆರಂಭ :** ಡೆನ್ಮಾರ್ಕ್ ಒಂದು ಪುಟ್ಟ ಕೃಷಿ ಪ್ರಧಾನ ದೇಶ, ಡ್ಯಾನೀಶ್ ಜನರು ರಾಕ್‌ಡೇಲ್ ಅಗ್ರಗಾಮಿಗಳ ಯಶಸ್ವಿ ಸಹಕಾರ ಸಂಘದ ಸ್ಥಾಪನೆಯಿಂದ ಪ್ರಭಾವಿತರಾಗಿದ್ದರು. ಡೆನ್ಮಾರ್ಕ್‌ನ ಎಲ್ಲಾ ಆರ್ಥಿಕ ಚಟುವಟಿಕೆಗಳಲ್ಲಿ ಸಹಕಾರ ಸಂಘಗಳು ಸ್ಥಾಪನೆಯಾಗಿ ಯಶಸ್ಸು ಸಾಧಿಸಿದ್ದರಿಂದ ಈ ದೇಶವನ್ನು "ಕೋ-ಅಪರೇಟಿವ್ ಡೆನ್ಮಾರ್ಕ್" ಎಂದು ಕರೆಯಲಾಗುತ್ತದೆ. ಇಂತಹ ಅದ್ಭುತ ಸಾಧನೆಯು ಸರ್ಕಾರದ ಬೆಂಬಲದಿಂದಾಗಲಿ ಅಥವಾ ಪರೋಪಕಾರಿ ಜನರಿಂದಾಗಲೀ ಅಥವಾ ಸಹಕಾರ ತತ್ವಜ್ಞಾನಿಗಳ ಭೋದನೆಯಿಂದ ಆಗಲಿ ಆಗಲಿಲ್ಲ. ಜನರ ಸ್ವಯಂ ಪ್ರೇರಣೆಯಿಂದ ಸಂಘಟಿತವಾಗಿ ಹಾಗೂ ಜನರ ಪೋಷಣೆಯಲ್ಲೇ ಬೆಳೆದ ವ್ಯವಸ್ಥೆಯಾಗಿತ್ತು. ಸ್ವ-ಇಚ್ಛೆಯಿಂದ ಒಂದುಗೂಡಿ, ಪರಸ್ಪರ ಸಹಾಯ ವಿಧಾನದಲ್ಲಿ ಸದಸ್ಯರ ಆರ್ಥಿಕ ಅಭಿವೃದ್ಧಿಯ ಧ್ಯೇಯ ಹೊಂದಿ, ಪ್ರಜಾಪ್ರಭುತ್ವ ಮಾರ್ಗದಲ್ಲಿ ಸಹಕಾರ ಚಳುವಳಿಯಲ್ಲಿ ಮಾದರಿ ಸಾಧನೆ ಮಾಡಿದ ಕೀರ್ತಿ ಈ ದೇಶದ ಜನರಿಗೆ ಸಲ್ಲುತ್ತದೆ. ಈ ದೇಶದ ಸಹಕಾರ ಕ್ಷೇತ್ರದಲ್ಲಿನ ಅತ್ಯುತ್ತಮ ಸಾಧನೆಗೆ ಎರಡು ಪ್ರಮುಖ ಅಂಶಗಳು ಕಂಡುಬರುತ್ತವೆ. 1) ಒಳ್ಳೆಯ ಶಿಕ್ಷಣ ವ್ಯವಸ್ಥೆ – ಡೆನ್ಮಾರ್ಕ್ ದೇಶದ ಶಿಕ್ಷಣ ವ್ಯವಸ್ಥೆಯು ಸಹಕಾರವು ಜನರ ಚಳುವಳಿಯಾಗಿ ರೂಪುಗೊಳ್ಳುವುದಕ್ಕೆ ಸಹಾಯಕವಾಗಿರುತ್ತದೆ. ಈ ದೇಶದಲ್ಲಿ 1814 ಕ್ಕೆ ಮೊದಲೇ ಶಿಕ್ಷಣವನ್ನು ಕಡ್ಡಾಯ ಗೊಳಿಸಿದ್ದರಿಂದ ಶಿಕ್ಷಣ ಮಟ್ಟವು ಉತ್ತಮವಾಗಿತ್ತು. ಫೋಕ್ ಹೈಸ್ಕೂಲ್‌ಗಳು, ಅಗ್ರಿಕಲ್ಚರ್‌ಲ್ ಸ್ಕೂಲ್‌ಗಳು, ರೂರಲ್ ಸ್ಕೂಲ್‌ಗಳು ಶಿಕ್ಷಣದ ಉತ್ತಮ ಸಾಧನೆಗೆ ಕಾರಣವಾಗಿರುತ್ತವೆ. 2) ಏಕರೂಪತೆ ಪ್ರಮಾಣದ ಭೂಹಿಡುವಳಿ – 19ನೇ ಶತಮಾನದ ಆರಂಭದಲ್ಲಿ ಡೆನ್ಮಾರ್ಕ್ ದೇಶದಲ್ಲಿ ಜಮೀನ್ದಾರರಿಂದ ಗೇಣಿದಾರರ ಹಾಗೂ ಲೇವಾದೇವಿದಾರರು ಮತ್ತು ದಲ್ಲಾಳಿ ವ್ಯಾಪಾರಸ್ಥರಿಂದ ಬಡ ರೈತರ ಶೋಷಣೆ ನಡೆಯುತಿತ್ತು. ಇಂತಹ ಸಂದರ್ಭದಲ್ಲಿ ಸರ್ಕಾರವು ಭೂ ಸುಧಾರಣೆಯ ಕಾನೂನು ಜಾರಿಗೊಳಿಸಿ ಭೂ ಹಿಡುವಳಿಯ ಮಿತಿಯನ್ನು ನಿಗಧೀಪಡಿಸಿ ಗೇಣಿದಾರರು ಮತ್ತು ಬಡ ರೈತರಿಗೆ ಜಮೀನಿನ ಹಂಚಿಕೆ ಮಾಡಿತು. ಈ ಎರಡು ಅಂಶಗಳು ಡ್ಯಾನೀಶ್ ಜನರಲ್ಲಿ ಆತ್ಮ ವಿಶ್ವಾಸವನ್ನು, ಸಮಾನತೆಯ ಭಾವನೆಯನ್ನು ಉಂಟು ಮಾಡಿತು. ಜನರು ಸ್ವಯಂ ಪ್ರೇರಣೆಯಿಂದ ಸಂಘಟಿತರಾಗಿ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಿದರು. ಸಹಕಾರ ಕೃಷಿ, ಡೇರಿ, ಗ್ರಾಹಕ, ವಿಮೆ, ಪತ್ತು ಹಂದಿಮಾಂಸ ಮತ್ತು ಕೋಳಿ ಮೊಟ್ಟೆ ಮಾರಾಟ ಸಂಘಗಳು, ಜಾನುವಾರು ಸಂಬಂಧಿತ ಸಂಘಗಳು, ಕುಶಲ ಕರ್ಮಿಗಳ ಸಂಘಗಳು, ಕಟ್ಟಡ ನಿರ್ಮಾಣ ಸಂಘಗಳು, ಬೇಕರಿ ಸಂಘಗಳು – ಹೀಗೆ ಅನೇಕ ಬಗೆಯ ಸಹಕಾರ ಸಂಘಗಳು ಸ್ಥಾಪನೆಯಾದವು. ಆದರೂ ವಿಶೇಷ ಸಾಧನೆ ಮತ್ತು ಯಶಸ್ಸು ಆಗಿದ್ದು ಡೇರಿ ಕ್ಷೇತ್ರದಲ್ಲಿ ಇದರಿಂದಾಗಿಯೇ ಪ್ರಪಂಚದಲ್ಲಿ ಡೆನ್ಮಾರ್ಕ್ ದೇಶವು "ಡೇರಿ ಫಾರಂ ಆಫ್ ಯುರೋಪ್" ಎಂದು ಖ್ಯಾತಿಗಳಿಸಿದೆ. 1879ರಲ್ಲಿ ಡ್ಯಾನೀಶ್ ಇಂಜೀನಿಯರ್ ಎಲ್.ಸಿ ನೀಲ್‌ಸೆನ್ (L.C.Nielsen) ಇವರು ಹಾಲಿನಿಂದ ನಿರಂತರವಾಗಿ ಕ್ರೀಮ್ ಪ್ರತ್ಯೇಕಿಸುವ ತಂತ್ರಜ್ಞಾನವನ್ನು ಕಂಡುಹಿಡಿದಿದ್ದು ಸಹಕಾರ ಕ್ಷೇತ್ರದಲ್ಲಿ ಪ್ರಗತಿಯ ವೇಗವನ್ನು ಹೆಚ್ಚಿಸಿತು. ಡೇರಿ ಸಂಘಗಳು ಪ್ರಾಂತೀಯ ಒಕ್ಕೂಟಗಳನ್ನು ಹಾಗೂ ಈ ಪ್ರಾಂತೀಯ ಒಕ್ಕೂಟಗಳು ರಾಷ್ಟ್ರ ಮಟ್ಟದಲ್ಲಿ ತಮ್ಮದೇ ಆದ ಒಕ್ಕೂಟವನ್ನು ರಚಿಸಿಕೊಂಡವು.

ಡೆನ್ಮಾರ್ಕ್ ದೇಶದ ಸಹಕಾರಿ ಡೇರಿ ಸಂಘಗಳ ಯಶಸ್ಸಿಗೆ ಜನರ ಸ್ವಯಂ – ಪ್ರೇರಣೆ, ದಕ್ಷ ಆಡಳಿತ ವ್ಯವಸ್ಥೆ, ಗ್ರಾಮ ಮಟ್ಟದಿಂದ ರಾಷ್ಟ್ರ ಮಟ್ಟದ ವರೆಗಿನ ಜೋಡಣೆಯ ಒಕ್ಕೂಟ ವ್ಯವಸ್ಥೆ, ಪರಿಣಾಮಕಾರಿ ಮಾರುಕಟ್ಟೆ ವ್ಯವಸ್ಥೆ, ಉನ್ನತವಾದ ತಂತ್ರಜ್ಞಾನ, ಪ್ರಾಮಾಣಿಕ ಸೇವೆ ಇತ್ಯಾದಿ ಪ್ರಮುಖ ಕಾರಣಗಳಾಗಿರುತ್ತವೆ.

ಡೆನ್ಮಾರ್ಕ್ ದೇಶವು "ಕೋ-ಅಪರೇಟಿವ್ ಡೆನ್ಮಾರ್ಕ್" ಎಂದು ಕರೆಸಿಕೊಳ್ಳಬೇಕಾದರೆ ಆ ದೇಶದ ಸಹಕಾರ ಚಳವಳಿಯ ಪ್ರಮುಖ ಲಕ್ಷಣಗಳು ಇಂತಿವೆ :

1) ಸಹಕಾರವು ಜನರ ಸ್ವಯಂ ಪ್ರೇರಣೆಯ ಚಳವಳಿ
2) ಸಹಕಾರ ಮತ್ತು ಸಂಘಗಳ ಬಗ್ಗೆ ಸದಸ್ಯರಲ್ಲಿ ನಿಷ್ಠೆ
3) ಸರ್ಕಾರದ ನೆರವೂ ಇಲ್ಲ, ಹಸ್ತಕ್ಷೇಪವೂ ಇಲ್ಲ, ನಿಯಂತ್ರಿಸುವ ಕಾನೂನುಗಳಿಲ್ಲ, ಆದರೆ ಸಾರ್ವಜನಿಕರಿಂದ ಠೇವಣಿ ಸ್ವೀಕರಿಸುತ್ತಿದ್ದ ಪತ್ತಿನ ಸಂಘಗಳು ಮತ್ತು ವಿಮಾ ಸಂಘಗಳಿಗೆ ನಿಯಮಗಳನ್ನು ರಚಿಸಲಾಗಿತ್ತು. ರಾಜಕೀಯ ಮತ್ತು ಧಾರ್ಮಿಕ ಮುಕ್ತ.
4) ಹೆಚ್ಚಾಗಿ ಏಕ ಉದ್ದೇಶಿತ ಸಂಘಗಳ ಸ್ಥಾಪನೆ, ಅದರಲ್ಲಿ ಪರಿಣತಿ ಮತ್ತು ಉತ್ತಮ ಸಾಧನೆ.
5) ಸದೃಢ ಒಕ್ಕೂಟ ವ್ಯವಸ್ಥೆ, ಒಕ್ಕೂಟ ಸಂಸ್ಥೆಗಳು ಕೆಳಹಂತದ ಸಂಸ್ಥೆಗಳಲ್ಲಿ ಹಸ್ತಕ್ಷೇಮ ಮಾಡದೆ ಜಂಟಿ ವ್ಯವಹಾರ ಸಂಬಂಧಿತ ವಿಷಯಗಳಿಗೆ ಸೀಮಿತ.
6) ಖಾಸಗಿ ವ್ಯವಸ್ಥೆಯೊಡನೆ ಸ್ಪರ್ಧಿಸುವುದಕ್ಕೆ ಆರೋಗ್ಯಕರ ವಾತಾವರಣ.
7) ಸಂಘಗಳು ಮತ್ತು ಸದಸ್ಯರ ನಡುವೆ ವ್ಯವಹಾರದ ಕರಾರುಗಳು.
8) ದಕ್ಷ ಆಡಳಿತ ವ್ಯವಸ್ಥೆ
9) ಸಮರ್ಪಕ ಮತ್ತು ಪರಿಣಾಮಕಾರಿ ಮಾರಾಟ ವ್ಯವಸ್ಥೆ

10) ತಾಂತ್ರಿಕ ಮಾರ್ಗದರ್ಶನ

11) ಸಮರೂಪದ ಸಾಮಾಜಿಕ ವ್ಯವಸ್ಥೆ ಇತ್ಯಾದಿ

ಡೆನ್ಮಾರ್ಕ್ ದೇಶದ ಸಹಕಾರದ ಸಾಧನೆಯ ಇತಿಹಾಸವು, ವಿಶೇಷವಾಗಿ ಸಹಕಾರಿ ಡೇರಿ ಸಾಧನೆಯ ಜಗತ್ತಿಗೇ ಮಾರ್ಗದರ್ಶಿಯಾಗಿದೆ.

**ಸ್ವೀಡನ್‌ನಲ್ಲಿ ಸಹಕಾರ ಚಳುವಳಿ ಆರಂಭ :** ಸ್ವೀಡನ್ ಚಿಕ್ಕ ದೇಶವಾದರೂ ಸಹಕಾರ ಚಳುವಳಿಯಲ್ಲಿ ಅದರ ಸಾಧನೆ, ವಿಶೇಷವಾಗಿ ಸಹಕಾರ ಗ್ರಾಹಕ ಚಳವಳಿಯ ಸಾಧನೆಯು ಬಹಳ ದೊಡ್ಡದು. 19ನೇ ಶತಮಾನದ ಮೊದಲ ಅರ್ಧ ಭಾಗದಲ್ಲಿ ಶೇ.75 ರಷ್ಟು ಜನರು ಕೃಷಿಯನ್ನು ಅವಲಂಭಿಸಿದ್ದರು. ಇಂಗ್ಲೆಂಡ್‌ನ ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದ ಸ್ವೀಡನ್‌ನಲ್ಲೂ ದೊಡ್ಡ ದೊಡ್ಡ ಕೈಗಾರಿಕೆಗಳು ಪ್ರಾರಂಭವಾದವು. ಗ್ರಾಮೀಣ ಭಾಗದ ಜನರು ಕಾರ್ಖಾನೆಗಳಲ್ಲಿ ಉದ್ಯೋಗ ಹುಡುಕಿಕೊಂಡು ನಗರ ಪ್ರದೇಶಗಳಿಗೆ ವಲಸೆ ಹೊರಟರು. ಇದರಿಂದ ಕೃಷಿ ಅವಲಂಬನೆ ಕಡಿಮೆಯಾಗ ತೊಡಗಿತು. ಕೈಗಾರಿಕೆಗಳು ಸ್ಥಾಪಿತವಾದ ಪ್ರದೇಶಗಳಲ್ಲಿ ಕೆಲಸಗಾರರು ದಿನಿತ್ಯದ ಪ್ರದಾರ್ಥಗಳನ್ನು ಖರೀದಿಸಲು ತೊಂದರೆಗಳನ್ನು ಅನುಭವಿಸಬೇಕಾಯಿತು. ಲಾಭ–ಬಡಕತನದ ಉತ್ಪಾದಕರು ಮತ್ತು ವರ್ತಕರು ಕೆಲಸಗಾರರನ್ನು ಶೋಷಣೆ ಮಾಡಲಾರಂಭಿಸಿದರು. ಇದೇ ವೇಳೆಗಾಗಲೇ ಇಂಗ್ಲೆಂಡ್‌ನಲ್ಲಿ ರಾಕ್‌ಡೇಲ್ ಅಗ್ರಾಗಾಮಿಗಳು ಯಶಸ್ವಿ ಗ್ರಾಹಕ ಸಹಕಾರ ಸಂಘವನ್ನು ಸ್ಥಾಪಿಸಿದ್ದು ವಿಷಯ ಕೆಲಸಗಾರರ ಗಮನಕ್ಕೆ ಬಂದಿತ್ತು. ಇವರೂ ಸಹ ರಾಕ್‌ಡೇಲ್ ಅಗ್ರಗಾಮಿಗಳ ಸಾಧನೆಯ ಮಾರ್ಗದಲ್ಲಿ ಗ್ರಾಹಕ ಸಹಕಾರ ಸಂಘಗಳನ್ನು ಸ್ಥಾಪಿಸಲು ತೀರ್ಮಾನಿಸಿದರು.

ಸ್ವೀಡನ್‌ನ ನಗರ ಮತ್ತು ಅರೆ–ನಗರ ಪ್ರದೇಶಗಳಲ್ಲಿ ಕೈಗಾರಿಕೆಗಳ ಕೆಲಸಗಾರರು ಅಧಿಕ ಸಂಖ್ಯೆಯಲ್ಲಿ ಸೇರಿಕೊಂಡು ಗ್ರಾಹಕ ಸಹಕಾರ ಸಂಘಗಳನ್ನು ಸ್ಥಾಪಿಸಿದರು. ಆದರೆ ಇವು ಯಶಸ್ವಿಯಾಗಲಿಲ್ಲ. ಕೈಗಾರಿಕೆಗಳ ಮಾಲೀಕರು ಕಾರ್ಟೆಲ್‌ಗಳನ್ನು ಮಾಡಿಕೊಂಡು ಅಧಿಕ ಲಾಭಗಳಿಕೆಯ ಉದ್ದೇಶದಿಂದ ಮಾರುಕಟ್ಟೆಯಲ್ಲಿ ಉತ್ಪಾದನೆಯ ಪ್ರಮಾಣವನ್ನು ನಿಯಂತ್ರಿಸುತ್ತಿದ್ದರು. ಹಾಗೆಯೇ ಖಾಸಗಿ ವರ್ತಕರು ತಮ್ಮೊಳಗೆ ಕೂಟಗಳನ್ನು ಮಾಡಿಕೊಂಡು ದಿನಬಳಕೆ ವಸ್ತುಗಳನ್ನು ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ 1899ರಲ್ಲಿ ಕೆ.ಎಫ್. ಎಂಬ ಗ್ರಾಹಕ ಸಂಘಗಳ ಒಕ್ಕೂಟವನ್ನು ಸ್ಥಾಪಿಸಲಾಯಿತು. ಇದರ ಮುಖ್ಯ ಉದ್ದೇಶ ಗ್ರಾಹಕ ಸಹಕಾರ ಸಂಘಗಳನ್ನು ಸಂಘಟಿಸುವುದು ಹಾಗೂ ಮಾಗದರ್ಶನ ನೀಡುವುದಾಗಿತ್ತು. ಆದರೆ, ಶ್ರೀಮಂತ ವರ್ತಕರು ಮತ್ತು ಉತ್ಪಾದಕರು ಗ್ರಾಹಕರನ್ನು ಹಾಗೂ ಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದುದ್ದನ್ನು ಮನಗಂಡು 1904ರಲ್ಲಿ ಸಗಟು ವ್ಯಾಪಾರವನ್ನು ಆರಂಭಿಸಿತು. ಇದಾದ ನಂತರ ಉತ್ಪಾದನಾ ಕ್ಷೇತ್ರವನ್ನು ಪ್ರವೇಶಿಸಿತು. ಆಡಳಿತ, ಹಣಕಾಸು, ತಾಂತ್ರಿಕತೆ ಇತ್ಯಾದಿ ವಿಷಯಗಳಲ್ಲಿ ಯೋಜಿತ ಕ್ರಮಗಳನ್ನು ಕೈಗೊಂಡಿದ್ದರಿಂದ ಕೆ.ಎಫ್ ಯಶಸ್ಸಿನ ಹೆಜ್ಜೆ ಹಾಕಿತು.

ಕೋ–ಅಪರೇಟಿವ್ ಫಾರ್‌ಬಂಡೆಟ್ (Ko-operative Forbundet: KF) ಇದು 1899ರಲ್ಲಿ ಆರಂಭವಾಯಿತು. 1904ರಲ್ಲಿ ಸಗಟು ವ್ಯಾಪಾರವನ್ನು ಆರಂಭಿಸಿ ತದನಂತರ ಉತ್ಪಾದನಾ ಚಟುವಟಿಕೆಯನ್ನು ಕೈಗೊಂಡಿತು. ಗ್ರಾಹಕ ಸಹಕಾರ ಚಳುವಳಿಯ ಸಂಘಟನೆ, ಮಾರ್ಗದರ್ಶನ, ಶಿಕ್ಷಣ ಮತ್ತು ಪ್ರಚಾರ ಕಾರ್ಯ, ಸಗಟು ವ್ಯಾಪಾರ, ಉತ್ಪಾದನೆ ಹೀಗೆ ಹಲವು ಚಟುವಟಿಕೆಗಳನ್ನು ಯೋಜಿತ ರೀತಿಯಲ್ಲಿ ಕೈಗೊಂಡಿತು. ಗ್ರಾಹಕರನ್ನು ಶೋಷಣೆ ಮಾಡಲು ಉತ್ಪಾದಕರು ಮತ್ತು ವರ್ತಕರು ಮಾಡಿಕೊಂಡಿದ್ದ ಕಾರ್ಟೆಲ್ ಹಾಗೂ ಕೂಟಗಳ ಎದಿರು ಯಶಸ್ಸು ಸಾಧಿಸಿತು. ಕೆಳ ಹಂತದಲ್ಲಿ ಪ್ರಾಥಮಿಕ ಸಂಘಗಳು, ಇವುಗಳ ಪ್ರತಿನಿಧಿಗಳನ್ನು ಒಳಗೊಂಡ ಜಿಲ್ಲಾ (ಡಿಸ್ಟ್ರಿಕ್ಟ್) ಕಾಂಗ್ರೆಸ್, ಅನಂತರ ಇವುಗಳ ಪ್ರತಿನಿಧಿಗಳನ್ನು ಒಳಗೊಂಡ ರಾಷ್ಟ್ರೀಯ ಒಕ್ಕೂಟ ಅಥವಾ ರಾಷ್ಟ್ರೀಯ ಕಾಂಗ್ರೆಸ್. ಈ ಮೂರು ಹಂತದ ಆಡಳಿತ ವ್ಯವಸ್ಥೆಯು ಸದೃಢವಾಗಿರುವಂತೆ ರೂಪಿಸಿದ ಕೆ.ಎಫ್, ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದ ದೃಷ್ಟಿಯಿಂದ ಸಮಿತಿ, ಉಪಸಮಿತಿಗಳನ್ನು ರಚಿಸಿತು.

ಪ್ರಾಥಮಿಕ ಸಂಘಗಳಿಗೆ ಅನುಕೂಲವಾಗುವಂಥ ಸ್ಥಳಗಳಲ್ಲಿ ಸಗಟು ಕೇಂದ್ರಗಳನ್ನು ಸ್ಥಾಪಿಸಿತು. ಆಡಳಿತ ವರ್ಗ ಮತ್ತು ಎಲ್ಲಾ ಸಿಬ್ಬಂದಿಗಳ ದಕ್ಷತೆ ಮತ್ತು ವೃತ್ತಿ ಪರತೆಯನ್ನು ಹೆಚ್ಚಿಸುವುದಕ್ಕೆ ಪೂರಕವಾಗಿ ಶಿಕ್ಷಣ, ತರಬೇತಿ, ಇತ್ಯಾದಿಗೆ ಆದ್ಯತೆ ನೀಡಿತು. ಕೃತಕ ಬೆಣ್ಣೆ (ಮಾರ್ಗರಿನ್) ತಯಾರಿಕಾ ಕಾರ್ಖಾನೆ, ಹಿಟ್ಟಿನ ಗಿರಣಿ, ಬ್ರೆಡ್ ತಯಾರಿಕೆ, ಪಾದರಕ್ಷೆ, ತಿನ್ನಲು ಬಳಸುವ ಮಾಂಸ, ರಬ್ಬರ್ ಟೈರ್ಸ್, ಎಲೆಕ್ಟ್ರಿಕಲ್ ಲ್ಯಾಂಪ್ಸ್, ಸಿರಾಮಿಕ್, ಕಾಗದ ವಿದ್ಯುತ್ ನಿರೋದಕ ಇನ್ಸುಲೇಟರ್ಸ್, ನೂಲು, ಉಡುಪು, ರಾಸಾಯನಿಕ ಗೊಬ್ಬರ, ಕೃಷಿ ಉಪಕರಣಗಳು, ಹೊಲಿಗೆಯಂತ್ರ ವ್ಯಾಕ್ಯೂಂ ಕ್ಲೀನರ್, ವಾಷಿಂಗ್ ಮಿಷಿನ್, ಪೌಡರ್, ಪಾಲೀಶ್, ಪಿಠೋಪಕರಣಗಳು, ಟಿ.ವಿ.ಸೆಟ್ಸ್, ಇತ್ಯಾದಿ ಹಲವು ಬಗೆಯ ಪದಾರ್ಥಗಳ ಉತ್ಪಾದನೆಯನ್ನು ಆರಂಭಿಸಿತು. ಉತ್ಪಾದಕರು ಹಾಗೂ ಖಾಸಗಿ ವರ್ತಕರು ಮಾಡಿಕೊಂಡಿದ್ದ ಕಾರ್ಟೆಲ್ ಮತ್ತು ಕೂಟಗಳ ಶಕ್ತಿಯನ್ನು ಕುಗ್ಗಿಸುವಲ್ಲಿ ಯಶಸ್ವಿಯಾಯಿತು.

ದೇಶ ಮತ್ತು ವಿದೇಶಗಳ ಬೇರೆ ಸಹಕಾರ ಸಂಸ್ಥೆಗಳೊಡನೆ ಸೇರಿಕೊಂಡು ಕೆಲವು ಪದಾರ್ಥಗಳ ಉತ್ಪದನಾ ಕಾರ್ಯವನ್ನು ಹಾಗೂ ವ್ಯಾಪಾರ ವಹಿವಾಟನ್ನು ಕೈಗೊಂಡಿತು. ಸಾವಿರಾರು ಜನರಿಗೆ ಉದ್ಯೋಗ ನೀಡಿತು. ಶಿಕ್ಷಣ ಮತ್ತು ಪ್ರಚಾರಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ಸಹಕಾರದಲ್ಲಿ ಒಳಗೊಂಡ ಎಲ್ಲ ವರ್ಗದ ಜನರಲ್ಲಿ ಜಾಗೃತಿ ಮೂಡಿಸಲು ಕೆಲವು ನಿಯತಕಾಲಿಕ ಪತ್ರಿಕೆಗಳ ಹಾಗೂ ಪುಸ್ತಕಗಳ ಪ್ರಕಟಣೆಗೆ ಆದ್ಯತೆ ನೀಡಿತು. ಸಹಕಾರದಲ್ಲಿ ತೊಡಗಿದ ಎಲ್ಲಾ ವರ್ಗದ ಜನ ಸಹಕಾರ ಶಿಕ್ಷಣ ಮತ್ತು ಜಾಗೃತಿಗಾಗಿ ಅವರವರ ಅವಶ್ಯಕತೆಗೆ ತಕ್ಕಂತೆ ಅನೇಕ ನಿಯತಕಾಲಿಕೆಗಳನ್ನು ಪ್ರಕಟಿಸಲಾಗುತಿತ್ತು.

ಉತ್ತಮ ಲೈಬ್ರರಿಯನ್ನು ಸ್ಥಾಪಿಸಿತು. ಮಹಿಳೆಯರು

## “ಮೂಡಲಗಿ ನಗರವನ್ನು ಸಹಕಾರ ನಗರವೆಂದು ಘೋಷಣೆ ಮಾಡಲು ಸರ್ಕಾರಕ್ಕೆ ಮನವಿ”



**ಬೆಳಗಾವಿ** : ನೂತನವಾಗಿ ತಾಲ್ಲೂಕು ಕೇಂದ್ರವಾಗಿರುವ ಮೂಡಲಗಿ ನಗರವನ್ನು ಸಹಕಾರನಗರ ಎಂದು ಘೋಷಣೆ ಮಾಡಲು ಅರಬಾವಿ ಕ್ಷೇತ್ರದ ಶಾಸಕರು ಹಾಗೂ ಕೆ.ಎಂ.ಎಫ್‌ನ ಅಧ್ಯಕ್ಷರಾದ ಶ್ರೀ ಬಾಲಚಂದ್ರ ಜಾರಕಿಹೊಳಿ ಅವರಿಗೆ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇದರ ನಿರ್ದೇಶಕರುಗಳಾದ ಡಾ॥ ಸಂಜಯ ಪಂಚಾಕ್ಷರಿ ಹೊಸಮಠ, ತಮ್ಮಣ್ಣ ಕೆಂಚರೆಡ್ಡಿ, ಉಮೇಶ ಶಿ. ಬಾಳಿ ರವರು ಮನವಿ ಸಲ್ಲಿಸಿದರು ಈ ಸಂದರ್ಭದಲ್ಲಿ ಸ್ಥಳೀಯ ಸಹಕಾರ ಸಂಘ ಸಂಸ್ಥೆಗಳ ಹಿರಿಯ ಸಹಕಾರಿಗಳು ಉಪಸ್ಥಿತರಿದ್ದರು.

ಸಕ್ರೀಯವಾಗಿ ಭಾಗವಹಿಸುವಂತಾಗಲು ಅವರಿಗೆ ಉಪಯೋಗವಾಗುವ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿತು. ಚಲನಚಿತ್ರಗಳನ್ನು ತಯಾರಿಸಿ ಸದಸ್ಯರಿಗೆ ಪ್ರದರ್ಶನ ನೀಡಲು ಸಂಘಗಳಿಗೆ ಬಾಡಗೆ ನೀಡುತಿತ್ತು. ಒಟ್ಟಾರೆ, ಒಂದು ಮಾದರಿ ಸಹಕಾರ ಗ್ರಾಹಕ ವ್ಯವಸ್ಥೆಯ ಸಾಧನೆಗಾಗಿ ಹಾಗೂ ಸದಸ್ಯರ ಒಳಿತಿಗಾಗಿ ಅಗತ್ಯವಿದ್ದು ಎಲ್ಲಾ ಸಮಗ್ರ ಕ್ರಮಗಳನ್ನು ಯೋಜಿಸಿ ಅನುಷ್ಠಾನಕ್ಕೆ ತಂದಿತು.

**ಕೃಷಿ ಸಹಕಾರ ಚಳುವಳಿ :** 19ನೇ ಶತಮಾನದ ಕೊನೆಯ ಭಾಗದಲ್ಲಿ ಶೇ.60 ರಷ್ಟು ಸ್ವೀಡಿಶ್ ಜನರು ಕೃಷಿಯನ್ನು ಅವಲಂಭಿಸಿದ್ದರು. ಕೃಷಿ ಪರಿಕರಗಳ ಮತ್ತು ಉತ್ಪನ್ನಗಳ ಮಾರಾಟ ಖಾಸಗಿಯವರ ಕೈಯಲ್ಲಿತ್ತು. ಇದರಿಂದ ತಮಗೆ ಆಗುತ್ತಿದ್ದಂತ ತೊಂದರೆಗಳನ್ನು ಗ್ರಹಿಸಿದ ರೈತರು ತಮ್ಮದೇ ಕೃಷಿ ಮತ್ತು ಕೃಷಿ ಪೂರಕ ಸಹಕಾರ ಸಂಸ್ಥೆಗಳನ್ನು ಪ್ರಾರಂಭ ಮಾಡಲಾರಂಭಿಸಿದರು. ಕೆ.ಎಫ್ ಸಾಧನೆಯು ಕೃಷಿ ಸಹಕಾರ ಸಂಘಗಳ ಬೆಳವಣಿಗೆಗೂ ಮಾರ್ಗದರ್ಶನವಾಯಿತು. ಹಾಲು ಉತ್ಪಾದನೆ, ಹಣ್ಣು ತರಕಾರಿ ಮಾರಾಟ, ಗ್ರಾಮೀಣ ಪತ್ತು. ಮಾಂಸ ಮಾರಾಟ, ಎಣ್ಣೆ ಬೀಜ ಬೆಳೇಗಾರರ, ತುಪ್ಪಟ ಉತ್ಪನ್ನ ಮಾಡುವವರ ಜಾನುವಾರು ಸಾಕಾಣಿಕೆ, ಮೊಟ್ಟೆ ಮತ್ತು ಕೋಳಿ ಮಾರಾಟ, ಅರಣ್ಯ ಭಟ್ಟಿ ಇಳಿಸುವವರ, ಹೀಗೆ ಹತ್ತು ಹಲವು ಬಗೆಯ ಸಂಘಗಳು ಸ್ಥಾಪನೆಯಾದವು.

ಇವುಗಳ ಧ್ಯೇಯೋದ್ದೇಶಗಳನ್ನು ಆಧರಿಸಿ 13 ವರ್ಗಗಳಾಗಿ ವಿಂಗಡಿಸಿ ಅವುಗಳು ತಮ್ಮದೇ ಆದ ರಾಷ್ಟ್ರ ಮಟ್ಟದ ಸಂಸ್ಥೆಯನ್ನು ಸ್ಥಾಪಿಸಿಕೊಂಡವು. ಈ 13 ಸಂಸ್ಥೆಗಳು ಕೂಡಿ ಫೆಡರೇಷನ್ ಆಫ್ ಸ್ವೀಡಿಶ್ ಫಾರ್ಮರ್ಸ್ ಅಸೋಸಿಯೇಶನ್ ಎಂಬ ಒಕ್ಕೂಟವನ್ನು ರಚಿಸಿಕೊಂಡವು. ಒಟ್ಟಾರೆ, ಕೃಷಿ ಸಹಕಾರ ಕ್ಷೇತ್ರವು ರೈತರ ಅಭಿವೃದ್ಧಿಗಾಗಿ ಉತ್ತಮ ಕಾರ್ಯ ತಂತ್ರಗಳನ್ನು ಅಳವಡಿಸಿಕೊಂಡಿತು. ಕೃಷಿ ಪರಿಕರಗಳ ಮಾರಾಟ, ಉತ್ಪನ್ನಗಳ ಮಾರಾಟ, ಸಂಸ್ಕರಣ, ಪತ್ತು, ಇತ್ಯಾದಿ ರೈತರ ಒಳಿತಿಗಾಗಿ ಅಗತ್ಯವಿದ್ದ ಎಲ್ಲಾ ಕ್ರಮಗಳನ್ನು ಸಮರ್ಪಕವಾಗಿ ಮತ್ತು ರಚನಾತ್ಮಕವಾಗಿ ಕೈಗೊಂಡವು.

**ಸಹಕಾರ ಶಿಕ್ಷಣ :** ಸ್ವೀಡನ್‌ನಲ್ಲಿ ಗ್ರಾಹಕ, ಕೃಷಿ ಮತ್ತು ಗೃಹ ನಿರ್ಮಾಣ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆಯಾಗಿರುತ್ತದೆ. ಇದಕ್ಕೆ ಸಹಕಾರ ಶಿಕ್ಷಣವೂ ಪ್ರಮುಖ ಕಾರಣಗಳಲ್ಲಿ ಒಂದಾಗಿರುತ್ತದೆ, ಸಹಕಾರ ಸಂಸ್ಥೆಗಳು ಯಶಸ್ವಿಯಾಗಬೇಕಾದರೆ ಸದಸ್ಯರು ಮತ್ತು ಸಿಬ್ಬಂದಿಯ ಸಹಕಾರದ ವ್ಯವಹಾರ ಜ್ಞಾನ ಮತ್ತು ತತ್ವಗಳ ಬಗ್ಗೆ ಕೌಶಲ್ಯ ಹೊಂದಬೇಕೆಂಬುದು ಈ ದೇಶದ ಜನರ ನಂಬಿಕೆಯಾಗಿತ್ತು. ಪ್ರತಿಯೊಂದು ಕ್ಷೇತ್ರವು ಅಗತ್ಯಕ್ಕೆ ತಕ್ಕಂತೆ ಶಿಕ್ಷಣ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಸಹಕಾರ ಸಾಹಿತ್ಯ ಪುಸ್ತಕಗಳಿಗೆ ಸಂಬಂಧಿಸಿದಂತೆ ಕೆ.ಎಫ್ ಹೊಂದಿರುವ ಗ್ರಂಥಾಲಯವು ಪ್ರಪಂಚದಲ್ಲೇ ಉತ್ತಮ ಗ್ರಂಥಾಲಯಗಳಲ್ಲಿ ಒಂದಾಗಿರುತ್ತದೆ.

**ಸ್ವೀಡಿಶ್ ಸಹಕಾರ ಚಳವಳಿಯ ಯಶಸ್ಸಿನ ವೈಶಿಷ್ಟ್ಯಗಳು :** ಸ್ವೀಡಿಶ್ ಸಹಕಾರ ಚಳುವಳಿಯ ಯಶಸ್ಸಿಗೆ ಮುಖ್ಯವಾದ ಅಂಶಗಳೆಂದರೆ

1) ಸ್ಪಷ್ಟ ಧ್ಯೇಯೋದ್ದೇಶಗಳು (2) ಪ್ರತಿ ಒಂದು ಕ್ಷೇತ್ರದ ಪರಿಣಾಮಕಾರಿಯಾದ ಒಕ್ಕೂಟ ವ್ಯವಸ್ಥೆ (3) ಉತ್ತಮ ನಾಯಕತ್ವ (4) ಬದ್ಧತೆ, ಶ್ರಮ (5) ನಗದು ವ್ಯಾಪಾರ (6) ಮಾರುಕಟ್ಟೆ ಅಧ್ಯಯನ ಮತ್ತು ಕಾಲಕಾಲಕ್ಕೆ ಯೋಗ್ಯ ಕ್ರಮಗಳು (7) ಅತ್ಯುತ್ತಮ ಶಿಕ್ಷಣ ಹಾಗೂ ತರಬೇತಿ ಹೊಂದಿದ ಉದ್ಯೋಗಿಗಳು (8) ಸದೃಢ ಹಣಕಾಸು ವ್ಯವಸ್ಥೆ (9) ಪ್ರಜಾ ಪ್ರಭುತ್ವ ವಿಧಾನ (10) ಗ್ರಾಹಕ ಸಂಸ್ಥೆಗಳು ಮತ್ತು ಉತ್ಪಾದಕರ ಸಂಸ್ಥೆಗಳ ನಡುವೆ ಪರಸ್ಪರ ಬೆಂಲಿಸುವ ಆರೋಗ್ಯಕರ ಸಂಬಂಧ (11) ಸ್ವಇಚ್ಛೆಯ ಪಾಲ್ಗೊಳ್ಳುವಿಕೆ ಹಾಗೂ ಸಹಕಾರದಲ್ಲಿ ಇಟ್ಟಿದ್ದ ನಂಬಿಕೆ ಮತ್ತು ವಿಶ್ವಾಸ ಹಾಗೂ ಸಹಕಾರ ಸಾಧನೆಯ ಸಂತೃಪ್ತಿ ಮನೋಭಾವ.

ಮುಂದಿನ ಸಂಚಿಕೆಗೆ...

# 67ನೇ ಅಖಿಲ ಭಾರತ ಸಹಕಾರ ಸಪ್ತಾಹ - 2020
## ನವೆಂಬರ್ 14 ರಿಂದ 20ರವರೆಗೆ

ಸಪ್ತಾಹದ ಧ್ಯೇಯ : "ಕೊರೋನಾ ಸೋಂಕು – ಆತ್ಮನಿರ್ಭರ ಭಾರತ – ಸಹಕಾರ ಸಂಸ್ಥೆಗಳು"
T COVID P A B

**7 ದಿನಗಳ ಆಚರಣೆಯ ಶೀರ್ಷಿಕೆಗಳು**

| ದಿನಾಂಕ | ವಿಷಯ | ಸ್ಥಳ | ನೇತೃತ್ವ |
|---|---|---|---|
| 14.11.2020 ಶನಿವಾರ | "ಕೊರೋನೋತ್ತರ, ಸಹಕಾರ ಸಂಸ್ಥೆಗಳ ಜವಾಬ್ದಾರಿ ಮತ್ತು ಪಾತ್ರ" Post Covid-19, Role and Responsibility of C | ಬೆಂಗಳೂರು | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., |
| 15.11.2020 ಭಾನುವಾರ | "ಸಹಕಾರಿ ಮಾರಾಟ, ಗ್ರಾಹಕ, ರೂಪಾಂತರ ಮತ್ತು ಮೌಲ್ಯವರ್ಧನೆ" C M P V | ಮಂಗಳೂರು A | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., |
| 16.11.2020 ಸೋಮವಾರ | "ಅಂತರ್ಜಾಲ ಸಂಪರ್ಕದ ಮೂಲಕ ಸಹಕಾರ ಶಿಕ್ಷಣ ತರಬೇತಿಯ ಪುನರ್‌ಮನನ" R T O C | ದಾವಣಗೆರೆ E | ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., |
| 17.11.2020 ಮಂಗಳವಾರ | "ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು" S C C | ಚಿಕ್ಕಬಳ್ಳಾಪುರ | ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಮತ್ತು ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ನಿ., |
| 18.11.2020 ಬುಧವಾರ | "ವ್ಯವಹಾರ, ಉದ್ಯೋಗ ಕಳೆದುಕೊಂಡವರು, ಬಾಧಿತರು ಪುನರುದ್ಯೋಗಸ್ಥರಾಗಲು ಕೌಶಲ್ಯಾಭಿವೃದ್ಧಿ" S D J B L | ಬೆಳಗಾವಿ R V | ಕರ್ನಾಟಕ ಹಾಲು ಮಹಾಮಂಡಳ ನಿ., |
| 19.11.2020 ಗುರುವಾರ | "ಯುವಜನ, ಮಹಿಳಾ ಮತ್ತು ಅಬಲವರ್ಗದವರಿಗಾಗಿ ಸಹಕಾರ ಸಂಸ್ಥೆಗಳು" C W W S | ಹೊಸಪೇಟೆ Y (ಬಳ್ಳಾರಿ ಜಿಲ್ಲೆ) | ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ನಿ., |
| 20.11.2020 ಶುಕ್ರವಾರ | "ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ, ಡಿಜಿಟಲೈಜೇಷನ್ ಮತ್ತು ಸಾಮಾಜಿಕ ಜಾಲತಾಣ" F I S M | ವಿಜಯಪುರ D | ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., |

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಅಲ್ಪಾವಧಿ ಕೃಷಿ ಸಾಲ ವಿತರಿಸಲು ಲಭ್ಯ ಸಂಪನ್ಮೂಲಗಳು.**

a) ಷೇರು ಬಂಡವಾಳ, ಸ್ವಂತ ನಿಧಿಗಳು

b) ಠೇವಣಿಗಳು.

c) ಪಡೆದ ಸಾಲಗಳು

d) ಮೇಲಿನ ಮೂರು

**2) 'ನಬಾರ್ಡ್' ತಳಹಂತದಲ್ಲಿ ವಿತರಿಸಿದ ................ ಪ್ರಮಾಣದಷ್ಟು ಪುನರ್ ಧನ ಸೌಲಭ್ಯ ಒದಗಿಸುತ್ತದೆ.**

a) ಶೇಕಡ 80

b) ಶೇಕಡ 100

c) ಶೇಕಡ 40

d) ಶೇಕಡ 10

**3) 'ಕಿಸಾನ್ ಕ್ರೆಡಿಟ್ ಸಾಲ'ವು .......... ಸಾಲದ ಮತ್ತೊಂದು ರೂಪ.**

a) ಅಲ್ಪಾವಧಿ ಕೃಷಿ ಸಾಲ

b) ಮಧ್ಯಮಾವಧಿ ಸಾಲ

c) ದೀರ್ಘಾವಧಿ ಸಾಲ

d) ಮೇಲಿನ ಮೂರು ಆಗಿರುವುದಿಲ್ಲ.

**4) 'ಕಿಸಾನ್ ಕ್ರೆಡಿಟ್ ಸಾಲ' ಮಿತಿ ನಿಗದಿ ಪಡಿಸುವಲ್ಲಿ ............... ನ್ನು ಪರಿಗಣಿಸಲಾಗುವುದು.**

a) ರೈತ ಹೊಂದಿರುವ ಕೃಷಿ ಪ್ರದೇಶ.

b) ವರ್ಷ ಪೂರ್ತಿ ಬೆಳೆಯುವ ಬೆಳೆಗಳು ಮತ್ತು ಆ ಬೆಳೆಗಳಿಗೆ ನಿಗದಿಪಡಿಸಿರುವ (ಸ್ಕೇಲ್ ಆಫ್ ಫೈನಾನ್ಸ್) ಸಾಲ ನೀಡಬೇಕಾದ ಅಳತೆಗೋಲು.

c) ರೈತರಿಗೆ ಸ್ಕೇಲ್ ಆಫ್ ಫೈನಾನ್ಸ್ ಅಲ್ಲದೆ ಮನೆ ವೆಚ್ಚ, ಶಿಕ್ಷಣ, ವೈದ್ಯಕೀಯ ವೆಚ್ಚಕ್ಕೆ ಅಧಿಕ ಮೊತ್ತ.

d) ಮೇಲಿನ ಮೂರು ಪರಿಗಣಿಸಲಾಗುವುದು.

**5) ಇತ್ತೀಚಿಗಿನ 'ನಬಾರ್ಡ್' ನೀತಿಯಂತೆ ಅಲ್ಪಾವಧಿ ಕೃಷಿ ಸಾಲ (ಬೆಳೆ ಸಾಲ, ಕೆ.ಸಿ.ಸಿ ಸಾಲ) ವನ್ನು ................ ಕಾರ್ಡ್ ಮೂಲಕವೇ ವಿತರಿಸಬೇಕು.**

a) 'ವಿಸಾ' ಕಾರ್ಡ್

b) 'ಎಕ್ಸ್‌ಪ್ರೆಸ್' ಕಾರ್ಡ್

c) 'ರೂಪೆ' ಕಾರ್ಡ್

d) ಮೇಲಿನ ಮೂರು ಆಗಿರುವುದಿಲ್ಲ.

**6) ಅಲ್ಪಾವಧಿ ಕೃಷಿ ಸಾಲ ವಸೂಲಿಗೆ ಸಹಾಯಕ ತಃಖ್ತೆ.**

a) ಲಾಭ–ನಷ್ಟ ತಃಖ್ತೆ

b) ಕುಳುವಾರು ಬಾಕಿ ಪಟ್ಟಿ

c) ಬೇಡಿಕೆ, ವಸೂಲಿ ಬಾಕಿ ತಃಖ್ತೆ

d) (ಬಿ) ಮತ್ತು (ಸಿ) ತಃಖ್ತೆ

**7) ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಕಲಂಗಳಲ್ಲಿ ಅಲ್ಪಾವಧಿ ಕೃಷಿ ಸಾಲ ನೇರ ವಸೂಲಿಗೆ ದೃಢೀಕರಣ ಪಡೆಯಲು ಇರುವ ಅವಕಾಶ.**

a) ಕಲಂ 99ರಲ್ಲಿ ವಸೂಲಾತಿ ದೃಢೀಕರಣ ಪಡೆಯುವುದು.

b) ಕಲಂ 100ರಲ್ಲಿ ವಸೂಲಾತಿ ದೃಢೀಕರಣ ಪಡೆಯುವುದು.

c) ಕಲಂ 99 ಮತ್ತು ಕಲಂ 100

d) ಮೇಲಿನ ಮೂರು ಆಗಿರುವುದಿಲ್ಲ.

**8) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ 'ಆದಾಯ ಗುರುತಿಸುವಿಕೆ' ಗೆ**

a) ವಸೂಲಿಯಾಗಬೇಕಾದ ಬಡ್ಡಿಯನ್ನು ಆದಾಯ ಎಂದು ಪರಿಗಣಿಸಬೇಕು.

b) ವಸೂಲಿಯಾಗಬಹುದಾದ ಬಡ್ಡಿಯನ್ನು ಆದಾಯ ಎಂದು ಪರಿಗಣಿಸಬಹುದು.

c) ವಸೂಲಿಯಾದ ಬಡ್ಡಿಯನ್ನು ಮಾತ್ರ ಆದಾಯ ಎಂದು ಪರಿಗಣಿಸಬೇಕು.

d) ಮೇಲಿನ ಮೂರು ಆಗಿರುವುದಿಲ್ಲ.

**9) ಪ್ರಾಥಮಿಕ ಕೃಷಿ ಪತ್ತಿ ಸಹಕಾರ ಸಂಘದ ಆಸ್ತಿಯನ್ನು ................ ಎಂದು ವಿಂಗಡಿಸಿ ಅವಕಾಶ ಕಲ್ಪಿಸಬೇಕು.**

a) ಉತ್ತಮ ಗುಣಮಟ್ಟ, ಕಡಿಮೆ ಗುಣಮಟ್ಟ, ಅನುಮಾನಾಸ್ಪದ ಆಸ್ತಿ.

b) ಉತ್ತಮ ಗುಣಮಟ್ಟ, ಅನುಮಾನಾಸ್ಪದ ನಷ್ಟದ ಆಸ್ತಿ

c) ಉತ್ತಮ ಗುಣಮಟ್ಟ, ಕಡಿಮೆ ಗುಣಮಟ್ಟ, ಅನುಮಾನಸ್ಪದ, ನಷ್ಟದ ಆಸ್ತಿ

d) ಮೇಲಿನ ಮೂರು ಆಗಿರುವುದಿಲ್ಲ.

**10) ನಷ್ಟದ ಆಸ್ತಿಗೆ ಕಲ್ಪಿಸಬೇಕಾದ ಅವಕಾಶದ ಶೇಕಡಾವಾರು ಪ್ರಮಾಣ**

a) ಶೇಕಡ 50

b) ಶೇಕಡ 80

c) ಶೇಕಡ 100

d) ಶೇಕಡ 25

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

A B C C D D D C D